ಸಂಪುಟ/Volume : 40
ಸಂಚಿಕೆ/Issue : 13
ಪುಟ/Pages : 1
ಬೆಲೆ/Price : ₹ 10/–

ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಅಕ್ಟೋಬರ್ 2018 ಮಾಸ ಪತ್ರಿಕೆ

**Akhila Karnataka Shikshaka Samachar | October 2018 | Monthly**




A Journal of Karnataka State Secondary Teachers' Association

ಸಂಪಾದಕೀಯ

# ಶಿಕ್ಷಕ ಗುರುವಾಗಲಾರನೇ?

ವಿದ್ಯಾರ್ಥಿ ಮತ್ತು ಸಮಾಜಗಳೆರಡರ ಮಧ್ಯೆ ಇರುವ ಸೇತುವೆ ಶಿಕ್ಷಕ. ಇಂದಿನ ಮಕ್ಕಳನ್ನೆಲ್ಲ ಮುಂದಿನ ಸತ್ಪ್ರಜೆಗಳನ್ನಾಗಿ ರೂಪಿಸುವ ಜವಾಬ್ದಾರಿ ನಿರ್ವಹಿಸುವವ ಶಿಕ್ಷಕ. ಅನೇಕ ಶ್ಲೋಕಗಳಲ್ಲಿ ಶಿಕ್ಷಕನ ಸ್ಥಾನಮಾನವನ್ನು ಎತ್ತರಕ್ಕೇರಿಸಿರುವುದನ್ನು ನಾವು ಕಾಣಬಹುದು. ಹಿಂದಿನ ಗುರುವಿನ ಸ್ಥಾನಕ್ಕೂ ಈಗಿನ ಶಿಕ್ಷಕನ ಸ್ಥಾನವನ್ನು ಹೋಲಿಸಿದಾಗ ಕಾಣುವ ವ್ಯತ್ಯಾಸ ಅಜಗಜಾಂತರ. ಹಿಂದಿನ ಗುರುವಿನ ಸ್ಥಾನಮಾನವನ್ನು, ಜವಾಬ್ದಾರಿಯನ್ನು ನಾವೆಲ್ಲಾ ಅರಿತಿರುವವರೇ. ಈಗಿನ ಶಿಕ್ಷಕರು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳುವುದು Not by choice, it's by chance.

'ಯಾವುದೇ ಕ್ಷೇತ್ರಗಳಲ್ಲಿ ಉದ್ಯೋಗ ಸಿಗದಿದ್ದರೆ ಶಿಕ್ಷಣ ಕ್ಷೇತ್ರದಲ್ಲಿ ಪ್ರಯತ್ನಿಸು ಸಿಗಬಹುದು' ಎಂಬುದು ರೂಢಿಮಾತು. Choice ನಿಂದಲೋ ಅಥವಾ chance ನಿಂದಲೋ ಒಂದು ಬಾರಿ ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಮೇಲೆ ಶಿಕ್ಷಕರ ಸ್ಥಾನದಿಂದ ಗುರುವಿನ ಸ್ಥಾನಕ್ಕೇರುವ ಪ್ರಯತ್ನ ಮಾಡಬೇಕಾದುದು ಪ್ರತಿಯೊಬ್ಬ ಶಿಕ್ಷಕರ ಕರ್ತವ್ಯ ಹಾಗೂ ಅನೇಕರು ಈ ಪ್ರಯತ್ನವನ್ನು ಶಿರಸಾವಹಿಸಿ ಮಾಡುತ್ತಾರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಪ್ರಯತ್ನದಲ್ಲಿ ಬರುವ ವಿಘ್ನಗಳೆಂತವು ಎಂಬುದನ್ನು ನಾವು ಗಮನಿಸೋಣ.

ಖಾಸಗಿ ಶಾಲೆಗಳಲ್ಲಿನ ಶಿಕ್ಷಕರಿಗೆ ಇರುವ ಒತ್ತಡವೇ ಬೇರೆ ರೀತಿಯದು. ಆ ಶಾಲೆಯನ್ನು ನಡೆಸುವ ನಿರ್ವಹಣಾಕಾರರ ಮತ್ತು ಶಾಲೆಯ ಮಾಲೀಕರ ಆಲೋಚನೆ ಮತ್ತು ಅಭಿರುಚಿಗಳಿಗೆ ತಕ್ಕಂತೆ ತಮ್ಮ ಮನಸ್ಥಿತಿ, ಬೋಧನಾ ವಿಧಾನಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಆದರೆ ಸರಕಾರಿ ಶಾಲೆಗಳಲ್ಲಿ ಹಾಗಲ್ಲ. ಶಿಕ್ಷಕನ ಜ್ಞಾನಭಂಡಾರ ರಾಷ್ಟ್ರಭಕ್ತಿ, ಸಂಸ್ಕಾರವೆಲ್ಲವನ್ನೂ ತನ್ನ ವಿದ್ಯಾರ್ಥಿಗಳಿಗೆ ಧಾರೆಯೆರೆಯಬಹುದು. ಆದರೆ ಇಲ್ಲಿ ಮತ್ತೊಂದು ಸಮಸ್ಯೆ. ಸರ್ಕಾರವು ಹೊಸದಾಗಿ ತರುವ ಅಥವಾ ಚಾಲನೆಯಲ್ಲಿರುವ ಯೋಜನೆ, ಅಂಕಿ ಅಂಶಕ್ಕೆ ಸಂಗ್ರಹಕಾರನಾಗಿ ಕೆಲಸ ನಿರ್ವಹಿಸಬೇಕಾದವನು ಶಿಕ್ಷಕ. ವಾರ್ಷಿಕ ಶೈಕ್ಷಣಿಕ ಅವಧಿಯ ಶೇ 19ರಷ್ಟು ಸಮಯವನ್ನು ಬೋಧನೆಗೆ ಮೀಸಲಿಡುವಂತಾಗಿರುವುದು ಖೇದಕರ.

ಬೋಧಕ ವೃತ್ತಿಗೆ ಅನೇಕ ಆಸೆ, ಕನಸುಗಳನ್ನು ಹೊತ್ತು ಬಂದಿರುವ ಶಿಕ್ಷಕ ಬೋಧಕೇತರ ಅನೇಕ ಕೆಲಸಗಳನ್ನು ನಿರ್ವಹಿಸಬೇಕಾದುದು ಅನಿವಾರ್ಯವಾಗಿದೆ. ಚುನಾವಣಾ ಕರ್ತವ್ಯ, ಅಕ್ಷರದಾಸೋಹ, ಕ್ಷೀರಭಾಗ್ಯ, ಜನಗಣತಿ, ದನಗಣತಿ, ಶಾಲೆ ಬಿಟ್ಟ ಮಕ್ಕಳ ಗಣತಿ, ವಿದ್ಯಾರ್ಥಿವೇತನ ಮಾಹಿತಿ ಭರ್ತಿಮಾಡುವುದು, STS ಮಾಹಿತಿ ಭರ್ತಿ ಮಾಡುವುದು, ಪ್ರಥಮದರ್ಜೆ ಸಹಾಯಕರಿಲ್ಲದಿದ್ದರೆ ಅವರ ಕೆಲಸ ನಿರ್ವಹಿಸುವುದು. ಅವಶ್ಯಕವೇ ಅಲ್ಲದ ತರಬೇತಿಗಳಿಗೆ ಹತ್ತಾರು ದಿನ ಹಾಜರಾಗುವುದು. ಒಂದೆ ಎರಡೇ ಹೇಳುತ್ತಾ ಹೋದರೆ ಇನ್ನೂ ಪಟ್ಟಿಯನ್ನು ಮುಂದುವರಿಸಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಅಂತರ್ಜಾಲದ ವ್ಯವಸ್ಥೆ ಇಲ್ಲದೇ ಇದ್ದರೂ ವಿದ್ಯಾರ್ಥಿಗಳ ಮಾಹಿತಿಯನ್ನು ಅನೇಕ ಬಾರಿ ಅಂತರ್ಜಾಲದ ಬಳಕೆಯಿಂದಲೇ ಮಾಡಬೇಕು. ಸರ್ಕಾರ ಜ್ಞಾಪನದಲ್ಲಿಯ ಕೊನೆಯ ವಾಕ್ಯವೆಂದರೆ ದಿನಾಂಕ ------ ರೊಳಗೆ ಮಾಹಿತಿಯನ್ನು ನೀಡದಿದ್ದರೆ ಶಾಲಾ ಮುಖ್ಯಸ್ಥರೇ ಹೊಣೆಗಾರರಾಗಬೇಕಾಗುತ್ತದೆ ಎಂದು. ಇನ್ನೂ ಶಾಲಾ ಮುಖ್ಯಸ್ಥರು ಶಿಕ್ಷಕರನ್ನು ಬೋಧನಾ ಕಾರ್ಯಕ್ಕೆ ಬಿಟ್ಟಾರೇ? ತಮ್ಮ ಒತ್ತಡವನ್ನು ಶಿಕ್ಷಕರ ಮೇಲೆ ಸಹಜವಾಗಿಯೆ ಹೇರುತ್ತಾರೆ. ಆಗ ಶಿಕ್ಷಕ ಲ್ಯಾಪ್‌ಟ್ಯಾಪ್ ಹಿಡಿದು ಅಂತರ್ಜಾಲದ ಚಕ್ರವ್ಯೂಹವನ್ನು ಬೇಧಿಸುತ್ತಾ ಮಾಹಿತಿಯನ್ನು ಹಗಲು ರಾತ್ರಿಯೆನ್ನದೇ ಭರ್ತಿ ಮಾಡಬೇಕು.

ಈಗ ಒಂದು ತಿಂಗಳ ಕೆಳಗೆ ಒಂದು ಸಮಾಚಾರ ಪತ್ರಿಕೆಯಲ್ಲಿ ಒಬ್ಬ ವ್ಯಕ್ತಿ ಚೀಲ, ಕೆಲವು ಕಾಗದಪತ್ರಗಳನ್ನು ಮತ್ತು ಲ್ಯಾಪ್‌ಟ್ಯಾಪ್ ಹಿಡಿದು ಬಸ್ ನಿಲ್ದಾಣದಲ್ಲಿ ಅಲ್ಲಿಂದಿಲ್ಲಿಗೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದಾಗ ಅಲ್ಲಿನ ಸ್ಥಳೀಯ ಪೋಲಿಸರು ಅವರನ್ನು ವಿಚಾರಿಸಿದಾಗ ಅವರೊಬ್ಬ ಶಿಕ್ಷಕ ವಿದ್ಯಾರ್ಥಿವೇತನದ ಅರ್ಜಿಯನ್ನು ಭರ್ತಿಮಾಡಲು ಶಾಲಾ ವೇಳೆಯಲ್ಲಿ ಸಮಯ ಸಾಕಾಗದೆ ತಮ್ಮ ಪ್ರಯಾಣದ ಅವಧಿಯನ್ನೂ ಸಹ ಆ ರೀತಿಯಾಗಿ ಸದ್ಬಳಕೆ ಮಾಡುತ್ತಿದ್ದಾರೆ ಎಂದು ಗೊತ್ತಾಯಿತು. ಹೀಗಿದೆ ನೋಡಿ ಈಗಿನ ಕಾಲದ ಶಿಕ್ಷಕರ ಪರಿಸ್ಥಿತಿ.

ಈ ಎಲ್ಲಾ ಸಂಕಷ್ಟಗಳಿಂದ ಶಿಕ್ಷಕರನ್ನು ಬಿಡುಗಡೆ ಮಾಡಿ ಅವಶ್ಯಕವಿರುವ ಬೋಧನೆಗೆ ಅನುಕೂಲವಾಗುವಂತಹ, ಕಾಲಕಾಲಕ್ಕೆ ಶಿಕ್ಷಕರ ಜ್ಞಾನವನ್ನು ವರ್ಧಿಸುವಂತಹ ತರಬೇತಿಗಳನ್ನು ನೀಡಿ, ಶಿಕ್ಷಕರನ್ನು ಶಾಲಾ ಕರ್ತವ್ಯಕ್ಕೆ ಮಾತ್ರ ನಿಯೋಜಿಸಿ ಶಾಲೆಯ ಗುಣಮಟ್ಟವನ್ನು ಉತ್ತಮ ಪಡಿಸಬೇಕು. ಶಿಕ್ಷಕ ಶಾಲಾ ಆವರಣದಲ್ಲಿ ಮೂಲಭೂತವಾಗಿ ಬೇಕಾಗಿರುವ ಅವಶ್ಯಕತೆಗಳನ್ನು ಪೂರೈಸಿ ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನವನ್ನು ಹೆಚ್ಚಿಸಬೇಕು. ಹಾಗೆಯೇ ಶಿಕ್ಷಕರೂ ಸಹ ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಬದಿಗಿಟ್ಟು ಶಾಲಾ ಆವರಣದಲ್ಲಿ ಪಾದಾರ್ಪಣೆ ಮಾಡಿದ ತಕ್ಷಣವೇ ವಿದ್ಯಾರ್ಥಿಗಳಿಗೆ ಮಾದರಿಯಾಗುವಂತಹ ಹಾಗೂ ಮಾರ್ಗದರ್ಶನ ನೀಡಿ ಸತ್ಪ್ರಜೆಯನ್ನು ರೂಪಿಸುವ ಗುರುವಾಗಿ (ವಿದ್ಯಾರ್ಥಿ- ಶಿಕ್ಷಕ-ಸಮಾಜ) ಬದಲಾಗಬೇಕು.

ಸಂಪಾದಕ

## ಪರಿವಿಡಿ


- ಶರನ್ನವರಾತ್ರಿಯೆಂಬ ನಾಡ ಹಬ್ಬ ಮತ್ತು ದೀಪಾವಳಿಯ ಸಂಭ್ರಮ 3
- ಕನ್ನಡ ರಾಜ್ಯೋತ್ಸವ – ಹೀಗಿರಲಿ 5
- ರಾಜ್ಯ ಮಹಿಳಾ ಮಿಲನ 6
- ಮಕ್ಕಳ ದಿನಾಚರಣೆ 7
- ಸ್ತ್ರೀ ಸಶಕ್ತೀಕರಣದತ್ತ ಸರ್ಕಾರದ ಚಿತ್ತ 8
- ದೈಹಿಕ ಶಿಕ್ಷಕರ ಕಾರ್ಯಾಗಾರ 9
- ವಾಲ್ಮೀಕಿ ಎಂಬ ಮಹಾಚೇತನ 10
- ಚಿತ್ರಸುದ್ದಿ 12

# ಶರನ್ನವರಾತ್ರಿಯೆಂಬ ನಾಡ ಹಬ್ಬ ಮತ್ತು ದೀಪಾವಳಿಯ ಸಂಭ್ರಮ



■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಭಾರತವನ್ನು 'ವಿಶ್ವಗುರು' ಎಂದು ಕರೆಯಲು ಕಾರಣ ಅದರ ವಿಶಿಷ್ಟ ಸಂಸ್ಕೃತಿ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿ, ಸಾಮರಸ್ಯದೊಂದಿಗೆ ಇಡೀ ದೇಶವನ್ನು ಮುನ್ನಡೆಸುತ್ತ ಏಕಸೂತ್ರತೆಯ ಅನನ್ಯತೆಯನ್ನು ಉಳಿಸಿಕೊಂಡು ಬಂದಿರುವ ಹಿರಿಮೆ ನಮ್ಮ ಭಾರತದ್ದಾಗಿದೆ.

ಈ ವೈವಿಧ್ಯಮಯ ಸಾಂಸ್ಕೃತಿಕ ಸಂಪತ್ತು ಇಷ್ಟು ಬಲವಾಗಿ ತನ್ನ ಮೌಲ್ಯವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿರುವುದು ಅದು ಧರ್ಮವನ್ನು ಅವಲಂಬಿಸಿರುವುದೇ ಆಗಿದೆ. ಅಂದರೆ, ನಮ್ಮ ದೇಶದ ಸಂಸ್ಕೃತಿಯು ಧರ್ಮಾಧಾರಿತವಾದುದು. ಈ ಧರ್ಮವನ್ನು, ಸಂಸ್ಕೃತಿಯನ್ನು ತಿಳಿಸುವ ಇದರ ಪರಂಪರೆಯನ್ನು ರಕ್ಷಿಸುತ್ತ ಭವಿಷ್ಯದ ಜನಾಂಗಕ್ಕೆ ಕೊಂಡೊಯ್ಯಲು ಸಹಕರಿಸುವ ಮಾಧ್ಯಮವೇ ನಾವು ಆಚರಿಸುವ ಹಲವಾರು ಹಬ್ಬಗಳು. ಈ ಹಬ್ಬಗಳೆಲ್ಲ ನಮ್ಮನ್ನು ಅವುಗಳ ವ್ಯಾಖ್ಯೆಗಳಿಗನುಗುಣವಾಗಿ ಏಕತೆಯ ಕಡೆಗೆ ಕೊಂಡೊಯ್ಯುತ್ತವೆ. ದೇಶದಾದ್ಯಂತ ಆಯಾ ಪ್ರಾದೇಶಿಕ ಸಂಪ್ರದಾಯಗಳಿಗೆ ತಕ್ಕಂತೆ, ಋತುಮಾನಗಳಿಗೆ ಸಂಬಂಧಿಸಿದಂತೆ, ರೂಪುಗೊಂಡಿರುವ ಹಬ್ಬಗಳು ಕೆಲವಿದ್ದರೆ ಇನ್ನು ಕೆಲವು ಇಡೀ ದೇಶದಲ್ಲಿ ಒಂದೇ ಕಾಲಕ್ಕೆ ಸಾರ್ವತ್ರಿಕವಾಗಿ ಆಚರಿಸುವಂತಹ ರಾಷ್ಟ್ರೀಯ ಹಬ್ಬಗಳೆನಿಸಿಕೊಂಡಿವೆ. ಒಟ್ಟಾರೆ ಭಾರತೀಯರು ವರ್ಷವಿಡೀ ಒಂದಲ್ಲ ಒಂದು ಹಬ್ಬದ ಸಡಗರದಲ್ಲಿ ಇರುತ್ತೇವೆ. ಹಲವು ಮತಧರ್ಮಗಳ ಜನರ ವಿಶ್ವಾಸ, ಶ್ರದ್ಧೆಗೆ ತಕ್ಕಂತೆ ಹಬ್ಬಗಳ ಸಾಂಪ್ರದಾಯಿಕ ಆಚರಣೆಯನ್ನು ಮಾಡುವ ಸ್ವಾತಂತ್ರ್ಯವಿರುವುದರಿಂದ ಯಾವುದೇ ಅಡೆತಡೆಯಿಲ್ಲದೆ ಇವೆಲ್ಲ ನಡೆಯುತ್ತವೆ.

ಹಿಂದೂಗಳ ಪ್ರಮುಖ ಹಬ್ಬಗಳೆಂದು ಗುರುತಿಸಿರುವ ಗಣೇಶ, ದಸರಾ, ದೀಪಾವಳಿ, ಸಂಕ್ರಾಂತಿ, ಯುಗಾದಿ ವಿಭಿನ್ನ ಪ್ರದೇಶಗಳಲ್ಲಿ ತಮ್ಮದೇ ಆದ ವಿಶಿಷ್ಟ ಆಚರಣೆಗಳ ಮೂಲಕ ಸಂಭ್ರಮಿಸುವ ಹಬ್ಬಗಳಾಗಿವೆ. ನಮ್ಮ ಪುರಾಣಗ್ರಂಥಗಳ, ಧರ್ಮಗ್ರಂಥಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಇವೆಲ್ಲ ಸ್ಥಳೀಯ ಸಂಸ್ಕೃತಿಯನ್ನೂ ಕೂಡಿಕೊಂಡು ಅವುಗಳ ಹಿರಿಮೆಯನ್ನು ಹೆಚ್ಚಿಸಿವೆ. ಆಗಸ್ಟ್ ತಿಂಗಳಲ್ಲಿ ಅಂದರೆ ಶ್ರಾವಣ ಮಾಸ ಬಂತೆಂದರೆ ಹಿಂದೂಗಳ ಹಬ್ಬಗಳು ಸಾಲುಸಾಲಾಗಿ ಬರುತ್ತವೆ. ನಾಗರಪಂಚಮಿ, ಗೌರಿ, ಗಣೇಶ ಹಬ್ಬಗಳ ಸಡಗರ ಮುಗಿಯುತ್ತಿದ್ದಂತೆ ಅಕ್ಟೋಬರ್, ನವೆಂಬರ್ ಎರಡೂ ತಿಂಗಳಲ್ಲಿ ಬರುವ ದಸರಾ ಮತ್ತು ದೀಪಾವಳಿ ಹಬ್ಬಗಳಂತೂ ದೇಶದ ಬಹುತೇಕ ರಾಜ್ಯಗಳಲ್ಲಿ ಆಚರಿಸುವಂತಹವು, ಅದರಲ್ಲಿಯೂ ದಸರಾ ನಮ್ಮ ಕರ್ನಾಟಕದ ನಾಡಹಬ್ಬವೆನಿಸಿರುವುದರಿಂದ ಇಲ್ಲಿ ಅದಕ್ಕೆ ಇನ್ನಷ್ಟು ಮಹತ್ವ.

ಆಶ್ವಯುಜ ಮಾಸದಲ್ಲಿ ಶರದೃತುವಿನ ಲಾಲಿತ್ಯವನ್ನು ಹೊತ್ತುತರುವ ಕಾಲದಲ್ಲಿ ಮಹಾನವಮಿಯ ಹಬ್ಬವನ್ನೊಳಗೊಂಡು ದಸರಾ, ದಶಹರ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುವ ಇದು ದುಷ್ಟಶಕ್ತಿಯ ಮೇಲೆ ಶಿಷ್ಟಶಕ್ತಿಯ ಗೆಲುವನ್ನು ಸಾರಿದ ಹಬ್ಬ, ಶುಕ್ಲಪಕ್ಷದಲ್ಲಿ ಆಚರಿಸುವ ಹತ್ತು ದಿನಗಳ ಸಂಭ್ರಮದ ಆಚರಣೆ ಇರುತ್ತದೆ. ರಾಮ ರಾವಣನ ಮೇಲೆ ಗೆಲುವು ಪಡೆದದ್ದೂ, ಪಾಂಡವರು ಅಜ್ಞಾತವಾಸವನ್ನು ಪೂರೈಸಿ ಕೌರವರ ಮೇಲೆ ಯುದ್ಧಕ್ಕೆ ತೆರಳಿದ್ದೂ ಇದೇ ಕಾಲದಲ್ಲಿಯೇ. ಹತ್ತು ದಿನಗಳ ಈ ಹಬ್ಬವನ್ನು ನಾಡಹಬ್ಬವೆಂದು ಮೈಸೂರಿನ ರಾಜ ಒಡೆಯರ್ ಘೋಷಿಸಿದ್ದು 1610ರಲ್ಲಿ ಪಾಡ್ಯದಿಂದ ವಿಜಯದಶಮಿಯವರೆಗೆ (ಮೊದಲ ದಿನದಿಂದ ಹತ್ತು ದಿನಗಳವರೆಗೆ) ಆಚರಿಸುವ ಈ ಹಬ್ಬದಲ್ಲಿ ಲಲಿತಾಪಂಚಮಿ, ಸರಸ್ವತಿ ಪೂಜೆ ಹಾಗೂ ದುರ್ಗಾಷ್ಟಮಿ ಸೇರಿದ್ದು ಎಲ್ಲ ಕಡೆ ದೇವಿಯ ದೇವಾಲಯಗಳಲ್ಲಿ ನವಾವರಣ ಪೂಜೆ, ಕುಂಕುಮಾರ್ಚನೆ, ಹೋಮ–ಹವನಗಳು ನಡೆಯುತ್ತವೆ. ಮನೆ ಮನೆಗಳಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಬೊಂಬೆಗಳ ಪ್ರದರ್ಶನ ನಡೆಯುತ್ತದೆ. ಏಳನೆಯ ದಿನ ಸರಸ್ವತೀ ಹಬ್ಬವನ್ನು, ಎಂಟನೆಯ ದಿನ ದುರ್ಗಾದೇವಿಯನ್ನೂ ಪೂಜಿಸಿ ಒಂಬತ್ತನೆಯ ದಿನವನ್ನು 'ಮಹಾನವಮಿ' ಎಂದು ಕರೆಯಲಾಗಿದೆ. ಆ ದಿನ, ಅರಸೊತ್ತಿಗೆಯ ಖಡ್ಗವನ್ನು ಪೂಜಿಸಿ ಅಲಂಕೃತ ಆನೆಗಳ, ಒಂಟೆಗಳ, ಕುದುರೆಗಳೊಂದಿಗೆ ಮೆರವಣಿಗೆ ನಡೆಯುವ ಸಂಪ್ರದಾಯವಿದೆ. ಆ ದಿನ ದಕ್ಷಿಣ ಭಾರತದಲ್ಲಿ, ಆಯುಧಗಳನ್ನು, ಎಲ್ಲ ಬಗೆಯ ಸಲಕರಣೆಗಳನ್ನು, ಪುಸ್ತಕವನ್ನು ಪೂಜಿಸಲಾಗುತ್ತದೆ. ಮಹಿಷಾಸುರಮರ್ದಿನಿಯ ಪೂಜೆಯನ್ನೂ ಅಂದು ಮಾಡಲಾಗುತ್ತದೆ. ದೇವಿಯು ಮಹಿಷಾಸುರನನ್ನು ಆ ಒಂಬತ್ತನೆಯ ದಿನದಂದು ಸಂಹರಿಸಿದ್ದರಿಂದ 'ಮಹಾನವಮಿ' ಎಂದು ಹೆಸರು. ದುರ್ಗಾದೇವಿ ನವರಾತ್ರಿಯಲ್ಲಿ ಒಂಬತ್ತು ಅವತಾರಗಳಲ್ಲಿ ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನಿ, ಕಾಲರಾತ್ರೀ, ಮಹಾಗೌರೀ, ಸಿದ್ಧಿಧಾತ್ರೀ ಎಂಬ ರೂಪಗಳ ಮೂಲಕ ಆರಾಧನೆಗೊಳ್ಳುತ್ತಾಳೆ,

ಈ ಒಂಬತ್ತೂ ದಿನಗಳೂ ಶಕ್ತಿದೇವತೆಯಾದ ದುರ್ಗೆಯು ಬೇರೆ ಬೇರೆ ಆಸುರೀ ಶಕ್ತಿಗಳ ವಿರುದ್ಧ ಯುದ್ಧಮಾಡಿ ಸಂಹರಿಸಿರುತ್ತಾಳೆ. ಈಕೆಯೇ ಚಾಮುಂಡೇಶ್ವರಿ, ಮೈಸೂರು ಅರಸರ ಮನೆತನದ ದೇವಿ, ಮೈಸೂರುನಗರದ ರಕ್ಷಕಿಯೂ ಹೌದು. ವಿಜಯದ ಪ್ರತೀಕವಾಗಿ ಈ ದಸರಾ ಉತ್ಸವವನ್ನು ವಿಜಯನಗರದ ಅರಸರು ಪ್ರಾರಂಭಿಸಿ ಅದರ ಪತನಾನಂತರ ಮೈಸೂರಿನ ಅರಸರು ಮುಂದುವರಿಸಿಕೊಂಡು ಬಂದರು.

1805 ರಿಂದಲೂ ಮೈಸೂರಿನಲ್ಲಿ ದಸರಾ ಹಬ್ಬದ ವೈಭವದ ಆಚರಣೆ ನಡೆಯುತ್ತಿದ್ದು ತಾಯಿ ಚಾಮುಂಡೇಶ್ವರಿಯ ಪ್ರತಿಮೆಯನ್ನು ಬೆಟ್ಟದಿಂದ ನಗರಕ್ಕೆ ತಂದು ಮೆರವಣಿಗೆ ಮಾಡಿ ಪೂಜಿಸಲಾಗುತ್ತಿತ್ತು.

ಪುಟ 4 ಕ್ಕೆ ➢

➢ ಪುಟ 3 ರಿಂದ..... ಸಂಭ್ರಮ...

ದಶಮಿಯ ದಿನ ಬನ್ನಿಮರವೆಂದು ಕರೆಯುವ ಶಮೀವೃಕ್ಷದ ಬಳಿಗೆ ರಾಜರು ತಮ್ಮ ಆಯುಧಗಳೊಂದಿಗೆ ಚತುರಂಗ ಬಲದೊಂದಿಗೆ ಮೆರವಣಿಗೆಯಲ್ಲಿ ಹೊರಟು ಅಲ್ಲಿ ಬನ್ನಿಮರಕ್ಕೆ ಪೂಜಿಸಿ ಬರುತ್ತಿದ್ದರು. ಅದೇ ವಿಶ್ವವಿಖ್ಯಾತ ಮೈಸೂರಿನ ಜಂಬೂಸವಾರಿ ಮೆರವಣಿಗೆ ಈ ಸಮಯದಲ್ಲಿ ನಾಡಿನ ಸಾಂಸ್ಕೃತಿಕ ವೈಭವವನ್ನು ಪ್ರದರ್ಶಿಸುವುದಕ್ಕಾಗಿ ವೈವಿಧ್ಯಮಯವಾದ ಕಲಾಪ್ರದರ್ಶನವು ಕಲಾವಿದರ ಸ್ತಬ್ಧ ಚಿತ್ರಗಳ ಮೂಲಕ ನಡೆಯುವ ಸಂಪ್ರದಾಯವು ಇಂದಿಗೂ ರೂಢಿಯಲ್ಲಿದೆ.

ಚಾಮುಂಡೇಶ್ವರಿಯ ಆರಾಧನೆ ನಡೆಯುವ ಈ ದಸರಾ ಹಬ್ಬದ ಒಂದು ವಿಶಿಷ್ಟವಾದ ಸಂಪ್ರದಾಯ ಗೊಂಬೆಗಳನ್ನು ಕೂರಿಸುವುದು. ದೇವಿಯು ಅಸುರ ಸಂಹಾರ ಮಾಡಲು ಅಗತ್ಯವಾದ ವಿಶೇಷ ಶಕ್ತಿಯನ್ನು ದೇವಾನುದೇವತೆಗಳೆಲ್ಲ ತಮ್ಮ ಶಕ್ತಿಗಳನ್ನು ಧಾರೆ ಎರೆದ ನಂತರ ಅವರೆಲ್ಲ ನಿಶ್ಚಲ ಗೊಂಬೆಗಳಾಗಿ ನಿಂತರೆಂದೂ, ಅವರ ಆ ತ್ಯಾಗವನ್ನು ಗೌರವಿಸಲು ಗೊಂಬೆಗಳನ್ನು ಅವರ ಪ್ರತೀಕವಾಗಿ ಕೂರಿಸಿ ಹತ್ತುದಿನಗಳು ಪೂಜಿಸಲಾಗುತ್ತದೆ.

ಕ್ರಮೇಣ ದೇವಾನುದೇವತೆಗಳ ಗೊಂಬೆಗಳು ಮಾತ್ರವಲ್ಲದೆ, ನಮ್ಮ ಸಂಸ್ಕೃತಿಯನ್ನು ಬಿಂಬಿಸುವಂತಹ ಹಾಗೂ ಐತಿಹಾಸಿಕ, ಧಾರ್ಮಿಕ ಕ್ಷೇತ್ರಗಳ ಆದರ್ಶ ವ್ಯಕ್ತಿಗಳ, ನಾಡಿನ ಪ್ರೇಕ್ಷಣೀಯ ಸ್ಥಳಗಳನ್ನು ಬಿಂಬಿಸುವ ಗೊಂಬೆಗಳು, ಮಾದರಿ ಪ್ರತಿಕೃತಿಗಳೂ ಈ ಗೊಂಬೆಗಳೊಂದಿಗೆ ಸೇರಿಕೊಂಡವು. ಇತ್ತೀಚಿನ ವರ್ಷಗಳಲ್ಲಂತೂ ಈ ಪ್ರತಿಭಾಪ್ರದರ್ಶನವು ನಾಡಿನ ಆಚೆಗೂ, ವಿಸ್ತಾರವಾಗುತ್ತಾ ದೇಶದ ಹಲವಾರು ವಿಶೇಷ ಸ್ಥಳಗಳ, ಜನರ ಪರಿಚಯವನ್ನು ಗೊಂಬೆಗಳ ಮೂಲಕ ನೀಡುವವರೆಗೆ ವಿಸ್ತರಿಸಿಕೊಂಡಿದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವದ ಆಚರಣೆಗಳೊಂದಿಗೆ ನಡೆಯುವ ದಸರಾ ಹಬ್ಬವು ದೇಶ, ವಿದೇಶಗಳ ಜನರನ್ನು ಆಕರ್ಷಿಸಿ ಮೈಸೂರಿನತ್ತ ಧಾವಿಸುವಂತೆ ಮಾಡುವ ಮತ್ತೊಂದು ಆಕರ್ಷಣೆ ಅಲ್ಲಿನ ಅರಮನೆ ಹಾಗೂ ಅದರ ದೀಪಾಲಂಕಾರ. ಅರಮನೆಯಲ್ಲಿ ದೇಶದ ನಾನಾ ಭಾಗಗಳಿಂದ ಬರುವ ಪ್ರಸಿದ್ಧ ಕಲಾವಿದರು (ಸಂಗೀತ, ನೃತ್ಯ ಮುಂತಾದ ಕ್ಷೇತ್ರಗಳ) ತಮ್ಮ ಕಾರ್ಯಕ್ರಮವನ್ನು ನೀಡಿ, ಸನ್ಮಾನಿತರಾಗಿ ತೆರಳುತ್ತಾರೆ. ರಾಜರು ನಡೆಸುತ್ತಿದ್ದ ಈ ಕಾರ್ಯವು ಪ್ರಸ್ತುತ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಈ ಸಮಯದಲ್ಲಿ ಒಂದು ತಿಂಗಳಿಗೂ ಹೆಚ್ಚುಕಾಲ ನಡೆಯುವ ವಸ್ತು ಪ್ರದರ್ಶನದಲ್ಲಿ ದೇಶದ ಎಲ್ಲ ಭಾಗಗಳಿಂದ ಎಲ್ಲ ವಸ್ತುಗಳ ಮಾರಾಟಗಾರರು ಬಂದು ಮಳಿಗೆಗಳನ್ನು ಹಾಕಿ ವ್ಯಾಪಾರವನ್ನು ಮಾಡುತ್ತಾರೆ. ಒಟ್ಟಾರೆ 'ದಸರಾ' ಎಂಬ ಈ ನಾಡಹಬ್ಬವು ಎಲ್ಲ ಬಗೆಯ ಸಂಭ್ರಮಗಳನ್ನು ಹೊಂದಿದ್ದು ಶಾಲಾ, ಕಾಲೇಜುಗಳೂ ಕೂಡ ರಜೆಯನ್ನು ಘೋಷಿಸಿ ತಮ್ಮ ಸಹಕಾರ ನೀಡುವುದರ ಮೂಲಕ ಪಾಲ್ಗೊಳ್ಳುತ್ತವೆ.

ದಸರಾ ಹಬ್ಬದ ನಂತರ ಬರುವ ಅಂದರೆ ಕಾರ್ತೀಕ ಮಾಸದಲ್ಲಿ ಬರುವ ಹಬ್ಬವೇ ದೀಪಾವಳಿ. ದೀಪಗಳ ಮೂಲಕ, ಬೆಳಕಿನೆಡೆಗೆ ಸಾಗುತ್ತೇವೆಂದು ಸಾರುವ ಹಬ್ಬ. " ವರುಷಕ್ಕೆ ಬರುವುದು ಅರಸು ದೀಪಾವಳಿ" ಎಂದು ಹಾಡುತ್ತೇವೆ. "ಸುತ್ತಲೂ ಹಬ್ಬಿರುವ ಕತ್ತಲೆಯ ಪರಿಹರಿಸಿ ಮತ್ತೆ ಬೆಳಕನ್ನು ತರಲಿ ದೀಪಾವಳಿ" ಎಂದು ಆಶಿಸುತ್ತೇವೆ. ಇದು ದೇಶದ ಬಹುತೇಕ ರಾಜ್ಯಗಳಲ್ಲಿ ಆಚರಿಸುವ ಅತ್ಯಂತ ಜನಪ್ರಿಯವಾದ ಹಬ್ಬ. ಹಿಂದೂ, ಜೈನ, ಸಿಖ್ ಮುಂತಾದ ಹಲವು ಜನಾಂಗಗಳು ಪಾಲ್ಗೊಳ್ಳುವ ಈ ಸಂಭ್ರಮಕ್ಕೆ ಅವರದೇ ಆದ ಐತಿಹಾಸಿಕ ಘಟನೆಗಳ, ಕಥೆಗಳ ಆಧಾರವಿದ್ದರೂ ಎಲ್ಲದರ ಸಂದೇಶ ಒಂದೇ. ಕತ್ತಲೆಯ ಮೇಲೆ ಬೆಳಕಿನ ವಿಜಯ. ಅಜ್ಞಾನದ ಮೇಲೆ ಜ್ಞಾನದ ಗೆಲುವು. ದುಷ್ಟಶಕ್ತಿಯನ್ನು ಶಿಷ್ಟಶಕ್ತಿಯು ಸಂಹರಿಸುವುದು.

ಉತ್ತರ ಭಾರತದ ಕಡೆ ರಾವಣನನ್ನು ಸಂಹರಿಸಿದ ಶ್ರೀರಾಮನು ಸೀತಾಸಹಿತನಾಗಿ ಅಯೋಧ್ಯೆಗೆ ಹಿಂತಿರುಗಿದ ಸಂಭ್ರಮಾಚರಣೆಯ ಸಂಕೇತವಾಗಿ ದೀಪಗಳನ್ನು ಬೆಳಗುವ ಪೌರಾಣಿಕ ಹಿನ್ನೆಲೆಯಿದ್ದರೆ ದಕ್ಷಿಣ ಕಡೆ ನರಕಾಸುರನನ್ನು ಶ್ರೀಕೃಷ್ಣನು ಸಂಹರಿಸಿದ ಕಥೆಯನ್ನು ಆಧರಿಸಿದೆ.

ಮೂರುದಿನಗಳ ಹಬ್ಬವನ್ನು ನರಕಚತುರ್ದಶಿ, ಅಮಾವಾಸ್ಯೆ, ಬಲಿಪಾಡ್ಯಮಿ ಎಂದು ಮೂರು ದಿನಗಳ ಹಬ್ಬವೇ ಈ ದೀಪಾವಳಿ. ದಶಾವತಾರಗಳಲ್ಲಿ ಒಂದಾದ ವಾಮನಾವತಾರದಲ್ಲಿ ಮಹಾವಿಷ್ಣುವು ಅಸುರಚಕ್ರವರ್ತಿ ಬಲೀಂದ್ರನಿಂದ ಮೂರು ಹೆಜ್ಜೆಗಳ ಸ್ಥಳವನ್ನು ದಾನವಾಗಿ ಪಡೆದು ತ್ರಿವಿಕ್ರಮನಾಗಿ ಬೆಳೆದು, ಆಕಾಶ, ಭೂಮಿಗಳನ್ನು ಆವರಿಸಿಬಿಡುತ್ತಾನೆ. ಮೂರನೆಯ ಹೆಜ್ಜೆಯಿಡಲು ದಾನಶೂರನೂ, ಸತ್ಯಸಂಧನೂ ಆದ ಬಲಿಯು ತನ್ನ ಶಿರದಮೇಲೇ ಇಡುವಂತೆ ಪ್ರಾರ್ಥಿಸುತ್ತಾನೆ. ಅವನ ನಿಗ್ರಹಕ್ಕಾಗಿಯೇ ಅವತಾರವೆತ್ತಿದ್ದ ವಾಮನನು ಬಲೀಂದ್ರನನ್ನು ಪಾತಾಳಕ್ಕೆ ದೂಡುತ್ತಾನೆ. ಅವನ ಬೇಡಿಕೆಯಂತೆ ಸದಾ ಅವನ ಮನೆ ಬಾಗಿಲಲ್ಲಿ ನಿಂತಿರುವುದಾಗಿ ಅನುಗ್ರಹಿಸಿ, ತನ್ನ ಪ್ರಜೆಗಳನ್ನೂ, ಸಾಮ್ರಾಜ್ಯವನ್ನೂ ನೋಡಿ ಬರಲು ಭೂಮಿಗೆ ವರ್ಷದಲ್ಲಿ ಒಂದು ದಿನ ಅವನಿಗೆ ಅವಕಾಶ ನೀಡುತ್ತಾನೆ. ಅದೇ ಬಲಿಪಾಡ್ಯಮಿಯ ದಿನವೆಂದು ಕರ್ನಾಟಕದಲ್ಲಿ ಅವನನ್ನು ಸ್ವಾಗತಿಸಿ ಸಂಭ್ರಮಿಸುತ್ತಾರೆ. ಅವನ ಸೈನಿಕರೆಂದು ಸಗಣಿಯ ಉಂಡೆಗಳನ್ನು ಮಾಡಿ ಅದರ ಮೇಲೆ ಹಳದೀ ಹೂವನ್ನಿಟ್ಟು ಮನೆಯ ಎಲ್ಲ ಬಾಗಿಲ ಎರಡೂ ಬದಿಗಳಲ್ಲಿಡುತ್ತಾರೆ. ನರಕಾಸುರನನ್ನು ಸಂಹರಿಸಿದ ಅಂಗವಾಗಿ ಶ್ರೀಕೃಷ್ಣನನ್ನು ಅಮಾವಾಸ್ಯೆಯಂದು ಲಕ್ಷ್ಮೀಪೂಜೆಯನ್ನು ಮಾಡಲಾಗುತ್ತದೆ.

ಪಶ್ಚಿಮ ಬಂಗಾಳ, ಅಸ್ಸಾಂ, ಗುಜರಾತಿನಲ್ಲಿ ಲಕ್ಷ್ಮೀ, ದುರ್ಗೆಯರನ್ನು ಪಟಾಕಿಗಳನ್ನು ಹಚ್ಚುವುದರ ಮೂಲಕ ಸಂಭ್ರಮಿಸುತ್ತಾರೆ.

ಸಿಖ್ ಜನರ ಎರಡನೇ ಪ್ರಮುಖ ಹಬ್ಬವೆನ್ನುವ ದೀಪಾವಳಿಯು ಗುರುಗೋವಿಂದಸಿಂಗ್ ' ಖಾಲ್ಸಾ' ಧರ್ಮಸ್ಥಾಪಿಸಿದ ದಿನವೆನ್ನಲಾಗಿದೆ. ಅಮೃತಸರದ ಸ್ವರ್ಣಮಂದಿರವು ಅಂದು ಅಸಂಖ್ಯಾತ ದೀಪಗಳಿಂದ ಝಗಮಗಿಸುತ್ತಿರುತ್ತದೆ.

ಮನೆ ಮನೆಗಳಲ್ಲಿ, ದೇವಾಲಯಗಳಲ್ಲಿ ದೀಪೋತ್ಸವವನ್ನು ಮಾಡಲಾಗುತ್ತದೆ. ಐಶ್ವರ್ಯದ ಅಧಿದೇವತೆಯಾದ ಮಹಾಲಕ್ಷ್ಮಿಯನ್ನು ಪೂಜಿಸಿ ಆಶೀರ್ವಾದವನ್ನು ಬೇಡುವ ದೀಪಾವಳಿ ಹಬ್ಬವು ಕಾರ್ತೀಕ ಮಾಸದಲ್ಲಿ ಬಂದು, ಇಡೀ ತಿಂಗಳು ಮನೆಯ ಮುಂದೆ ದೀಪಗಳನ್ನು ಇಡುವ ಸಂಪ್ರದಾಯವು ಕರ್ನಾಟಕದಲ್ಲಿದೆ. ಎಲ್ಲ ಕಡೆ ದೀಪಗಳದೇ ಸಂಭ್ರಮ.

ಅಕ್ಟೋಬರ್– ನವೆಂಬರ್ ತಿಂಗಳುಗಳಲ್ಲಿ ಬರುವ ದಸರೆ ಮತ್ತು ದೀಪಾವಳಿ ಎರಡೂ ಹಬ್ಬಗಳು ಕರ್ನಾಟಕ ಮಾತ್ರವಲ್ಲದೆ ದೇಶದ ಬಹುತೇಕ ರಾಜ್ಯಗಳಲ್ಲಿ ಆಚರಿಸಲಾಗುವ ಮಹತ್ವದ ಹಬ್ಬಗಳಾಗಿವೆ. ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಾರುವ ವಿಶಿಷ್ಟ ಆಚರಣೆಗಳಾಗಿವೆ. ಧರ್ಮ, ಸಂಪ್ರದಾಯ, ಸಂಸ್ಕೃತಿ, ಪ್ರತಿಭೆಗಳ ಸಮ್ಮಿಲನವನ್ನು ಇಲ್ಲಿ ಕಾಣುತ್ತೇವೆ.

●

# ಕನ್ನಡ ರಾಜ್ಯೋತ್ಸವ – ಹೀಗಿರಲಿ

■ ಶ್ವೇತಾದ್ರಿ
ಬೆಂಗಳೂರು

ಇನ್ನೇನು 8–10 ದಿನಗಳಲ್ಲಿ ನವೆಂಬರ್ ಬಂದೇಬಿಡುತ್ತದೆ. ಕನ್ನಡಿಗರಿಗೆಲ್ಲ ಸಂಭ್ರಮವೋ ಸಂಭ್ರಮ. ಆ ತಿಂಗಳು ಪೂರ್ತಿ, ಡಿಸೆಂಬರ್‌ನಲ್ಲಿಯೂ ರಾಜ್ಯೋತ್ಸವದ ಆಚರಣೆ. ರಾಜ್ಯ ಸರ್ಕಾರ ಪ್ರತಿ ವರ್ಷ ರಾಜ್ಯೋತ್ಸವದಲ್ಲಿ ಕನ್ನಡ ಸಾಹಿತ್ಯಕ್ಕೆ ಗಣನೀಯ ಸೇವೆಯನ್ನು ಸಲ್ಲಿಸಿದ ಸಾಹಿತಿಗಳಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸುತ್ತದೆ. ಇದರೊಂದಿಗೆ ಕನ್ನಡ ಸಂಘಸಂಸ್ಥೆಗಳು ಸಾರ್ವಜನಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತವೆ. ನಮ್ಮ ನೆಚ್ಚಿನ ನಟರು, ಗಾಯಕರು, ಸಾಹಿತಿಗಳನ್ನು ಕರೆಸಿ ಸಂತೋಷಿಸುತ್ತೇವೆ. ಮನೋರಂಜನೆಗಾಗಿ ವಾದ್ಯಗೋಷ್ಠಿಯನ್ನು ಏರ್ಪಡಿಸಲಾಗುತ್ತದೆ. ಅದರಲ್ಲಿ ಚಿತ್ರಗೀತೆಗಳಿಗೆ ಪ್ರಾಧಾನ್ಯತೆ. ಗೀತೆಗಳನ್ನು ಕೇಳಿ ಕುಣಿದು ಖುಷಿಪಡುತ್ತೇವೆ. ಇದು ಇಂದು ನಮಗೆ ಕಾಣಿಸುವ ರಾಜ್ಯೋತ್ಸವದ ಚಿತ್ರಣ. ನಾವು ರಾಜ್ಯೋತ್ಸವವನ್ನು ಏಕೆ ಆಚರಿಸುತ್ತೇವೆ ಎಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರ ಸಿಗುವುದೇ ?

ನಾವು ಆಚರಿಸುವ ಕನ್ನಡ ರಾಜ್ಯೋತ್ಸವದ ಹಿಂದಿನ ಉದ್ದೇಶವನ್ನು ತಿಳಿದುಕೊಂಡು, ಈಗ ನಾವು ಆಚರಿಸುತ್ತಿರುವ ರಾಜ್ಯೋತ್ಸವದ ಜೊತೆಗೆ ಹೆಚ್ಚು ಸಾರ್ಥಕವಾದ ರೀತಿಯಲ್ಲಿ ನಾಡಹಬ್ಬ ರಾಜ್ಯೋತ್ಸವವನ್ನು ಆಚರಿಸಬಹುದೆಂದು ಚಿಂತಿಸುವುದು ಇಂದಿನ ಅಗತ್ಯ. ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಕರ್ನಾಟಕ ಮೈಸೂರು ಪ್ರಾಂತ್ಯವಾಗಿತ್ತು. ಆ ಪ್ರಾಂತ್ಯದಲ್ಲಿ ಕನ್ನಡ ಮಾತನಾಡುವ ಕೆಲವು ಪ್ರದೇಶಗಳು ಆಡಳಿತಾತ್ಮಕವಾಗಿ ಮಹಾರಾಷ್ಟ್ರ, ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಿಗೆ ಸೇರಿತ್ತು. ಇದರಿಂದಾಗಿ ಹಲವಾರು ಸಮಸ್ಯೆಗಳು ಎದುರಾಗುತ್ತಿತ್ತು. ಇವುಗಳ ನಿವಾರಣೆಗಾಗಿ ಹಾಗೂ ಭಾವನಾತ್ಮಕ ದೃಷ್ಟಿಯಿಂದ 'ಕರ್ನಾಟಕ ಏಕೀಕರಣ'ದ ಅಗತ್ಯತೆಯನ್ನು ಮನಗಂಡು ಅದಕ್ಕಾಗಿ ಅನೇಕ ಮಹನೀಯರು ಪ್ರಯತ್ನಿಸಿದರು. ಕ್ರಿ.ಶ. 1890ರ ಸುಮಾರಿಗೆ ಧಾರವಾಡದಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ಪ್ರಾರಂಭವಾಗಿ ಆ ಮೂಲಕ ಕನ್ನಡಿಗರು ಸಂಘಟಿತರಾಗಿ ಏಕೀಕರಣದ ಪ್ರಯತ್ನಕ್ಕೆ ನಾಂದಿ ಹಾಡಿದರು. ಈ ಪ್ರಯತ್ನದಲ್ಲಿ ಕರ್ನಾಟಕ ಕುಲಪುರೋಹಿತರೆಂದೇ ಖ್ಯಾತರಾದ ಆಲೂರು ವೆಂಕಟರಾಯರು, ಮೊಹರೆ ಹನುಮಂತರಾಯರು ಮುಂತಾದ ಮಹನೀಯರ ಹೋರಾಟ, ತ್ಯಾಗ ಚಿರಸ್ಮರಣೀಯ. ಈ ಎಲ್ಲ ಪ್ರಯತ್ನಗಳ ಫಲವಾಗಿ 1956 ನವೆಂಬರ್ 1ರಂದು ಏಕೀಕರಣಗೊಂಡ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು. ಕನ್ನಡಿಗರೆಲ್ಲ ಒಂದು ಆಡಳಿತಕ್ಕೆ ಒಳಪಡುವಂತಾಯಿತು. ಈ ಸಂಭ್ರಮದ ಆಚರಣೆಯೇ ಪ್ರತಿವರ್ಷ ನಾವು ನವೆಂಬರ್ 1ರಂದು ಆಚರಿಸುವ 'ಕನ್ನಡ ರಾಜ್ಯೋತ್ಸವ'.

ರಾಜ್ಯೋತ್ಸವ ಆಚರಣೆಯ ಮೂಲಕ ಕನ್ನಡ ನಾಡು–ನುಡಿಯ ಹಿರಿಮೆಯನ್ನು, ವೈಶಿಷ್ಟ್ಯವನ್ನು, ಪರಂಪರೆಯನ್ನು ಕಿರಿಯರಿಗೆ ಪರಿಚಯಿಸಿ, ಉಳಿಸಿ, ಬೆಳೆಸುವ ಮಹತ್ತರ ಉದ್ದೇಶವಿದೆ. ಈ ಉದ್ದೇಶ ಈಡೇರಬೇಕಾದರೆ ನಮಗೆ ನಮ್ಮ ಕನ್ನಡ ಭಾಷೆಯ ಬಗೆಗೆ ಅಭಿಮಾನವಿರಬೇಕು. ನಿಜಕ್ಕೂ ನಾವು ಭಾಷಾಭಿಮಾನಿಗಳೇ ? ಪರಿಸ್ಥಿತಿ ನೋಡಿದರೆ ಗಾಬರಿ, ಖೇದ, ನಿರಾಶೆ ಉಂಟಾಗುತ್ತದೆ. ನಮಗೆ ಕನ್ನಡ ಮಾತನಾಡುವುದಕ್ಕೆ ಸಂಕೋಚ, ಹಿಂಜರಿಕೆ. ಹೊರಗಡೆ ಕನ್ನಡದಲ್ಲಿ ಮಾತನಾಡಿದರೆ ನಮ್ಮ ಗೌರವಕ್ಕೆ ಕುಂದು, ಬುದ್ಧಿವಂತನಲ್ಲವೆಂದು ಬೇರೆಯವರು ಎಲ್ಲಿ ಭಾವಿಸುವರೋ ಎಂಬ ಭಯ. ಹೊರಗಡೆ ಏಕೆ? ಮನೆಯಲ್ಲಿಯೂ ಕನ್ನಡದಲ್ಲಿ ಮಾತನಾಡುವುದು ಕಣ್ಮರೆಯಾಗುತ್ತಿದೆ. ಅದು ನಮ್ಮ ಅಂತಸ್ತಿಗೆ ಕಡಿಮೆ ಎಂಬ ಕೀಳರಿಮೆಯ ಭಾವನೆ. ಇವೆಲ್ಲದರ ನಡುವೆಯು ನಾವು ಮಾತನಾಡುವ ಕನ್ನಡ ಕನ್ನಡವೇ ಆಗಿರುತ್ತದೆಯೇ? ಬಹುತೇಕ ಇಂಗ್ಲಿಷ್ ಪದಗಳ ಮಧ್ಯೆ ಕನ್ನಡ ಶಬ್ದಗಳ ಬಳಕೆ. ಕಾರ್ಯಕ್ರಮಗಳ ನಿರೂಪಣೆ, ಟಿ.ವಿ. ಧಾರಾವಾಹಿಗಳು, ಚಲನಚಿತ್ರಗೀತೆಗಳು, ಅಷ್ಟೇಕೆ ಯುವ ಕವಿಗಳ ಕವನಗಳಲ್ಲೂ ಧಾರಾಳವಾಗಿ ಇಂಗ್ಲಿಷ್ ಬಳಕೆಯಾಗಿರುತ್ತದೆ. ಮೊದಲಿನಿಂದಲೂ ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಗಾಢವಾಗಿದೆ. ಸಹಜವೆಂಬಂತೆ ಕನ್ನಡದೊಂದಿಗೆ ಸಂಸ್ಕೃತ ಬೆರೆತಿದೆ. ಹಾಗಾಗಿ 12ನೆಯ ಶತಮಾನದಲ್ಲಿದ್ದ ಕವಿ ನಯಸೇನ "ಸುದ್ದಗನ್ನಡದೊಳ್ ತಂದಿಕ್ಕುವುದೇ ಸಕ್ಕದಮಂ । ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ ॥" ಎಂದು ಮೆರೆದ ಭಾಷಾಭಿಮಾನ ವ್ಯರ್ಥವಾಗಿ ಕನ್ನಡದಲ್ಲಿ ಸಂಸ್ಕೃತದ ಬಳಕೆ ಹಾಸುಹೊಕ್ಕಿದೆ. ಈಗ ಇಂಗಿಷ್ ಭಾಷೆಯೂ ಅನಿವಾರ್ಯವೆಂಬಂತೆ ಕನ್ನಡದೊಂದಿಗೆ ಬಳಕೆ ಮಾಡುತ್ತಿದ್ದೇವೆ. ಹಾಗಾದರೆ ಇದು ತಪ್ಪೇ ? ಕನ್ನಡಿಗರು ಸಂಸ್ಕೃತ, ಇಂಗಿಷನ್ನು ಬಳಸಬಾರದೆ ಎಂದರೆ ಖಂಡಿತ ತಪ್ಪಲ್ಲ. ಒಂದು ಭಾಷೆಯನ್ನು ಬಳಸುವಾಗ ಆ ಭಾಷೆಯನ್ನೇ ಪೂರ್ಣವಾಗಿ ಬಳಸುವುದು ಉಚಿತ ತಾನೆ. ಅನೇಕರು ಕನ್ನಡ ಮಾತನಾಡುವಾಗ ಸಾಕಷ್ಟು ಉಚ್ಚಾರಣೆಯ ದೋಷಗಳು ಕೇಳಿ ಬರುತ್ತದೆ. ಓದು, ಬರವಣಿಗೆಯಲ್ಲಿಯೂ ತಪ್ಪುಗಳ ಸರಮಾಲೆಯೇ ಇರುತ್ತದೆ. ಈ ಪರಿಸ್ಥಿತಿ ಕೇವಲ ವಿದ್ಯಾರ್ಥಿಗಳಿಗೆ ಸೀಮಿತವಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸಲು ಪ್ರಯತ್ನಿಸಬೇಕಾದುದು ನಮ್ಮೆಲ್ಲರ ಜವಾಬ್ದಾರಿಯಲ್ಲವೇ?

ಕನ್ನಡ ಭಾಷೆ ಸುಮಾರು ಎರಡೂವರೆ ಸಾವಿರ ವರ್ಷಗಳ ಇತಿಹಾಸ ಹೊಂದಿದ್ದರೆ, ಕನ್ನಡ ಸಾಹಿತ್ಯ, ಕಾವ್ಯ ಪರಂಪರೆ ಸುಮಾರು ಸಾವಿರದನೂರು ವರ್ಷಗಳಷ್ಟು ಹಿರಿದು. ಅಂದಿನಿಂದ ಇಂದಿನವರೆಗೆ ಕನ್ನಡ ಸಾಹಿತ್ಯ ಎಲ್ಲ ಪ್ರಕಾರಗಳಲ್ಲೂ ಶ್ರೀಮಂತವಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಹೆಮ್ಮೆ ಕನ್ನಡದ್ದು. ಈಗ ಸಂಘಸಂಸ್ಥೆಗಳು ರಾಜ್ಯೋತ್ಸವದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವುದರ ಜೊತೆಜೊತೆಗೇ ಕನ್ನಡ ಸಾಹಿತ್ಯ, ಕವಿಗಳನ್ನು ಪರಿಚಯಿಸುವ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಬಹುದಾಗಿದೆ. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ವಿಶೇಷವಾಗಿ ಕನ್ನಡ ಶಿಕ್ಷಕರು ವಿದ್ಯಾರ್ಥಿಗಳಿಗೆ ಶುದ್ಧವಾದ ಕನ್ನಡವನ್ನು ಮಾತನಾಡಲು, ಓದಲು, ಬರೆಯಲು ಕಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಮಕ್ಕಳಿಗೆ ಕನ್ನಡದ ಶ್ರೇಷ್ಠ ಕವಿಗಳ, ಸಾಹಿತ್ಯದ ಬಗೆಗೆ ಅಭಿರುಚಿ ಹುಟ್ಟಿಸಿ, ಕನ್ನಡದ ಬಗ್ಗೆ ಒಲವನ್ನು ಮೂಡಿಸುವುದು ಇಂದಿನ ಅಗತ್ಯ. ಕನ್ನಡಿಗರನ್ನು ನಿಜವಾದ ಅರ್ಥದಲ್ಲಿ ಭಾಷಾಭಿಮಾನಿಗಳಾಗಿ ಮಾಡುವುದೇ ರಾಜ್ಯೋತ್ಸವದ ಆಚರಣೆಯ ಉದ್ದೇಶವೂ ಕೂಡ. ಹಾಗಾದಾಗ ರಾಜ್ಯೋತ್ಸವದ ಆಚರಣೆ ಹೆಚ್ಚು ಸಾರ್ಥಕವೆನಿಸುತ್ತದೆ. ನಾವು ನಮ್ಮ ಭಾಷೆಯ ಬಗೆಗೆ ನಿರಭಿಮಾನಿಗಳಾಗದೆ, ದುರಭಿಮಾನಿಗಳೂ ಆಗದೆ ಸ್ವಾಭಿಮಾನಿಗಳಾಗೋಣ. ●

# ರಾಜ್ಯ ಮಹಿಳಾ ಮಿಲನ

ಪ್ರತಿಯೊಬ್ಬರ ಮೊದಲ 'ಹೀರೋಯಿನ್' ಎಂದರೆ ಅದು ತಾಯಿ, ನಂತರದ ಸ್ಥಾನ–ಶಿಕ್ಷಕಿ. ಶಿಕ್ಷಣ ಕ್ಷೇತ್ರದ ಬಗ್ಗೆ ನನಗೆ ತುಂಬಾ ಗೌರವವಿದೆ. ಶಿಕ್ಷಣ, ಕ್ಷೇತ್ರಕ್ಕೆ ಉತ್ತಮ ಪ್ರತಿನಿಧಿಗಳನ್ನು ಗುರುತಿಸಿ, ಆಯ್ಕೆ ಮಾಡಿ ಕಳುಹಿಸುವ ಜವಾಬ್ದಾರಿ ನಿಮ್ಮದು. ಏಕೆಂದರೆ ಎಲ್ಲ ಕ್ಷೇತ್ರಗಳಿಗೂ ಇದು ಬುನಾದಿ. ಇಲ್ಲಿನ ಒಬ್ಬೊಬ್ಬ ಮಹಿಳೆ 10 ಜನ ಸಂಘಟಕರನ್ನು ಪ್ರತಿನಿಧಿಸುತ್ತಾಳೆ. ಇಂದು ಆರಂಭವಾದ ಈ ಸಂಖ್ಯೆ ಇದರ ನೂರರಷ್ಟಾಗಿ ಬೆಳೆಯಬೇಕು. ಆಗಲೂ ನನ್ನನ್ನು ಆಹ್ವಾನಿಸಲು ಮರೆಯಬೇಡಿ ಎಂದು ಕನ್ನಡದ ಪ್ರಸಿದ್ಧ ಚಲನಚಿತ್ರ ನಟಿ ಹಾಗೂ ಮಾಜಿ ವಿಧಾನಪರಿಷತ್ ಸದಸ್ಯೆಯಾಗಿದ್ದ ಶ್ರೀಮತಿ ತಾರಾ ಅನುರಾಧರವರು ಹೇಳಿದರು.

ದಿನಾಂಕ 21–9–18 ರಂದು ಬೆಂಗಳೂರಿನ 'ಯಾದವಸ್ಮೃತಿ'ಯ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯದಲ್ಲಿ ರಾಜ್ಯ ಮಹಿಳಾ ಪ್ರಮುಖ್ ಶ್ರೀಮತಿ ಎನ್. ವಾಸುಕಿಯವರ ನೇತೃತ್ವದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಮಹಿಳಾ ಶಿಕ್ಷಕರ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ತಾರಾ ಅನುರಾಧಾರವರು ಮಾತನಾಡುತ್ತಾ ಸಂಘಟಕರಿಗೆ ಆತ್ಮೀಯವಾಗಿ ಹೀಗೆ ಹೇಳಿದ್ದರು.

ಅಖಿಲ ಭಾರತೀಯ ಶೈಕ್ಷಿಕ್ ಮಹಾಸಂಘದ ಮಹಿಳಾ ವಿಭಾಗದ ರಾಷ್ಟ್ರೀಯ ಸಹಕಾರ್ಯದರ್ಶಿಯಾದ ಶ್ರೀಮತಿ ಡಿ.ಕೆ. ಮಮತಾ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸಂರಕ್ಷಕರೂ, ಮಾಜಿ ವಿಧಾನಪರಿಷತ್ ಸದಸ್ಯರೂ, ಹಿರಿಯರೂ ಆದ ಶ್ರೀಯುತ ಕೃ. ನರಹರಿಯವರು ದೀಪಪ್ರಜ್ವಲಿಸುವ ಮೂಲಕ ಉದ್ಘಾಟನೆ ಮಾಡಿದರು. ಅವರು ಮಾತನಾಡಿ 'ಮೊದಲ ಸಭೆಗೆ ದೂರದೂರಿನಿಂದ ಬಂದಿದ್ದೀರಿ, ನಿಮ್ಮನ್ನೆಲ್ಲ ಕಂಡು ಅತೀವ ಆನಂದವಾಗುತ್ತಿದೆ. ಮಹಿಳೆಯರು ಮನೆಬಿಟ್ಟು ಬರಲು ಎಷ್ಟು ಕಷ್ಟವೆಂದು ನಾನು ಬಲ್ಲೆ. ಮುಂದಿನ ದಿನಗಳಲ್ಲಿ ನಿಮ್ಮ ಸಂಖ್ಯೆ, ಶಕ್ತಿ ಅಪಾರವಾಗಲಿ' ಎಂದು ಶುಭ ಹಾರೈಸಿದರು.

ಸಭೆಯಲ್ಲಿ ಹಾಜರಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಾಧ್ಯಕ್ಷರು, ವಿಧಾನ ಪರಿಷತ್ ಸದಸ್ಯರೂ ಆದ ಶ್ರೀಯುತ ಅರುಣ್ ಶಹಾಪೂರ ಅವರು ಉಪಸ್ಥಿತರಿದ್ದ ಎಲ್ಲ ಶಿಕ್ಷಕಿಯರ ಪರಿಚಯ ಮಾಡಿಕೊಂಡರು. ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀಯುತ ಚಿದಾನಂದ ಪಾಟೀಲರು ಸಂಘದ ಸ್ಥಾಪನೆಯ ಉದ್ದೇಶ, ಇದರ ಕಾರ್ಯವ್ಯಾಪ್ತಿ, ಉದ್ದೇಶಗಳ ಬಗ್ಗೆ ತಿಳಿಸಿದರು.

ನಂತರ ಚರ್ಚಾರೂಪದಲ್ಲಿ ಸಭೆ ಮುನ್ನಡೆಸಿಕೊಂಡು ಹೋದರು. ಶಿಕ್ಷಕಿಯರಿಗಾಗಿ ಒಂದು ಸಂಘಟನೆಯ ವಿಭಾಗ ಬೇಕೆ? ಏಕೆ ಬೇಕು? ಅದರ ಕಾರ್ಯವ್ಯಾಪ್ತಿ ಹೇಗಿರಬೇಕು? ಎಲ್ಲೆಲ್ಲಿ ಸಂಘಟನೆಗಳನ್ನು ಮಾಡಬೇಕು? ಸಂಘಟನೆಯ ಮೂಲಕ ಯಾವ ಯಾವ ಕಾರ್ಯಕ್ರಮಗಳನ್ನು ಮಾಡಬೇಕು? ಸಂಘಟನೆಯ ಮೂಲಕ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು? ಸಂಘಟನೆ ಹೇಗಿರಬೇಕು? ಇತ್ಯಾದಿ ವಿಷಯಗಳ ಬಗ್ಗೆ ಕೂಲಂಕುಷ ಚರ್ಚೆ ನಡೆಯಿತು. ಇದೇ ಅವಧಿಯಲ್ಲಿ ಶಿಕ್ಷಕಿಯರು ಮನೆಯಲ್ಲಿ, ಶಾಲೆಯಲ್ಲಿ ಎದುರಿಸುವ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಈ ಮಧ್ಯೆಯೂ ಸಂಘಟನೆಯಲ್ಲಿ ತೊಡಗುವ ಮನೋಭಾವನೆಯ ಬಗ್ಗೆ ಮೆಚ್ಚುಗೆ ಸೂಚಿಸಿದರು. ತಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ ದೊರೆತ ತೃಪ್ತಿ ಶಿಕ್ಷಕಿಯರದಾಗಿತ್ತು. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 35 ಜನ ಶಿಕ್ಷಕಿಯರು ಹಾಜರಿದ್ದರು.

ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ ಶ್ರೀಯುತ ಎ. ಗಂಗಾಧರಾಚಾರಿ ಅವರು ಸಭೆಯಲ್ಲಿದ್ದ ಸರ್ವರಿಗೂ ಹೃದಯ ತುಂಬ ವಂದನೆ ಸಲ್ಲಿಸಿದರು.

**ವರದಿ –ಶ್ರೀಮತಿ ಜಿ.ಎನ್ ವಾಸುಕಿ, ರಾಜ್ಯ ಮಹಿಳಾ ಪ್ರಮುಖ್**

# ಹಸಿರು ಕ್ರಾಂತಿಯ ನೇತಾರ ಅಮೈ ಮಹಾಲಿಂಗ ನಾಯ್ಕ್

ಬರಡು ಭೂಮಿಯನ್ನು ಹಸಿರಿನಿಂದ ಕಂಗೊಳಿಸುವಂತೆ ಮಾಡಿದ ಅಮೈ ಮಹಾಲಿಂಗ ನಾಯ್ಕ್ ಅವರನ್ನು ಹಸಿರು ಕ್ರಾಂತಿಯ ನೇತಾರ ಎಂದರೆ ತಪ್ಪಾಗಲಾರದು.

37 ವರ್ಷಗಳಲ್ಲಿ 5 ಸುರಂಗಗಳನ್ನು ತೋಡಿ ಅವರು 700 ಗಿಡಗಳನ್ನು ಬೆಳೆಸಿದ್ದಾರೆ. ದಕ್ಷಿಣ ಕನ್ನಡದವರಾದ ನಾಯ್ಕ್ ಎರಡು ಎಕರೆ ಬರಡು ಭೂಮಿಯನ್ನು ಇಂದು ಸಂಪೂರ್ಣ ಸಾವಯವ ತೋಟವನ್ನಾಗಿ ಪರಿವರ್ತನೆ ಮಾಡಿದ್ದಾರೆ.

300 ಅಡಿಕೆ ಮರ, 75 ತೆಂಗಿನ ಮರ, 150 ಗೇರು ಬೀಜದ ಮರ, 200 ಬಾಳೆ ಗಿಡ, ಕರಿಮೆಣಸುಗಳು ಇವರ ತೋಟದಲ್ಲಿ ಸಮೃದ್ಧವಾಗಿ ನಳನಳಿಸುತ್ತಿವೆ. ಮಹಾಲಿಂಗ ಭಟ್ ಎಂಬುವವರಿಗೆ ಸೇರಿದ ಈ ಭೂಮಿ 40 ವರ್ಷಗಳ ಹಿಂದೆ ನೀರಿಲ್ಲದೆ ಬರಡಾಗಿತ್ತು, ಆದರೆ ಭಟ್ ಅವರ ಬಳಿ ತೋಟದ ಕೆಲಸ ಮಾಡುತ್ತಿದ್ದ ನಾಯ್ಕ್ ಅವರ ಪರಿಶ್ರಮ, ಶ್ರದ್ಧೆಯ ಫಲವಾಗಿ ಆ ಭೂಮಿ ಇಂದು ನಳನಳಿಸುತ್ತಿದೆ.

ಆ ಭೂಮಿಯಲ್ಲಿ ನಾಯ್ಕ್‌ಗೆ ಮನೆಕಟ್ಟಲು ಮಹಾಲಿಂಗ ಭಟ್ ಅನುಮತಿ ನೀಡಿದ್ದರು, ಆದರೆ ಅಲ್ಲಿ ನೀರಿರಲಿಲ್ಲ, ಆದರೆ ಮರು ಚಿಂತನೆ ಮಾಡದ ನಾಯ್ಕ್ ಸುರಂಗವನ್ನು ಏಕಾಂಗಿಯಾಗಿ ತೋಡಿ ದೂರದಿಂದ ಈ ಭೂಮಿಗೆ ನೀರು ಹರಿದು ಬರುವಂತೆ ಮಾಡುವ ಪ್ರಯತ್ನ ಮಾಡಿದರು. ಪತ್ನಿಯ ಸಹಕಾರ ಇವರಿಗಿತ್ತು. ಆದರೆ ಒಂದಲ್ಲ ಎರಡಲ್ಲ ನಾಲ್ಕನೇ ಸುರಂಗ ತೋಡಿದರೂ ನೀರು ಬರಲಿಲ್ಲ, ಗ್ರಾಮಸ್ಥರು ಇವರನ್ನು ಗೇಲಿ ಮಾಡಲಾರಂಭಿಸಿದರು. ಆದರೂ ಛಲ ಬಿಡದ ಅವರು ಐದನೇ ಸುರಂಗವನ್ನು 35 ಮೀಟರ್‌ಗಳವರೆಗೆ ತೋಡುವಾಗ ಜಲರಾಶಿ ರೂಪದಲ್ಲಿ ಬಂಗಾರವೇ ಅವರ ಕೈಗೆ ಸಿಕ್ಕಂತಾಯಿತು.

ಇಂದು ಬರಗಾಲದಲ್ಲೂ ಅವರ ಮನೆ ಬಾಗಿಲಿಗೆ ಪ್ರತಿನಿತ್ಯ 6 ಸಾವಿರ ಲೀಟರ್ ನೀರು ಅವರ ಮನೆಗೆ ಬರುತ್ತದೆ. ಮಳೆ ನೀರು ಕೊಯ್ಲನ್ನೂ ಇವರು ಮಾಡುತ್ತಾರೆ. ಇವರ ಪ್ರಯತ್ನದ ಫಲವಾಗಿ ಇಂದು ಬರಡು ಭೂಮಿ ಹಸಿರಾಗುತ್ತಿದೆ.

**ಕೃಪೆ : news13.in**

# ಮಕ್ಕಳ ದಿನಾಚರಣೆ

■ ಸುಮಂಗಲ
ಸಹಶಿಕ್ಷಕಿ, ರಾಮನಗರ

ವಿಶ್ವದಾದ್ಯಂತ ಆಚರಿಸಲ್ಪಡುತ್ತಿರುವ ಅನೇಕ ಸಾಮಾಜಿಕ, ಶೈಕ್ಷಣಿಕ, ನೈತಿಕ, ವೈಜ್ಞಾನಿಕ ಆಚರಣೆಗಳೆಲ್ಲವೂ ಆರಂಭವಾದಾಗಿನಿಂದ ಇಂದಿಗೂ ಅರ್ಥಪೂರ್ಣವಾಗಿ ಆಚರಿಸಲ್ಪಡುತ್ತಿರುವುದು ಉಲ್ಲೇಖನೀಯ. ಅವೆಲ್ಲವೂ ಆಶಾದಾಯಕ, ನಿರೀಕ್ಷಿತ, ಸಕಾರಾತ್ಮಕ, ಗುಣಾತ್ಮಕ ಪ್ರಗತಿಯ ಗುರಿಯಿಂದ ಹಾಗೂ ಸಮಾಜಮುಖಿ ಉದ್ದೇಶಗಳ ಈಡೇರಿಕೆಗಳ ದೃಷ್ಟಿಯಿಂದಲೇ ಎಂಬ ಅಂಶವನ್ನು ನಾವ್ಯಾರೂ ಅಲ್ಲಗಳೆವಂತಿಲ್ಲ. ಕೇವಲ ಸಾಂಕೇತಿಕ ಆಚರಣೆಗಳಿಂದ ಆಕರ್ಷಿತರಾಗಿರುವ ನಾವು ನಿಜವಾದ ಫಲಿತಾಂಶಗಳಿಂದ ವಿಮುಖರಾಗಿದ್ದೇವೆ. ಗಿಡ ನೆಟ್ಟರಾಯಿತೇ ನೀರೆರೆಯುವುದು ಬೇಡವೇ? ರೆಕ್ಕೆ ಇದ್ದರೆ ಸಾಕೇ ಹಾರಲು ಬಾನೊಂದು ಬೇಡವೇ? ನೀವೇ ಹೇಳಿ.

ಮಕ್ಕಳಿಗಾಗಿಯೇ ಕೆಲವೊಂದು ನಿರ್ದಿಷ್ಟ ಹಕ್ಕುಗಳು, ದೌರ್ಜನ್ಯ ತಡೆ, ಬಾಲಕಾರ್ಮಿಕರ ಜೀತವಿಮುಕ್ತಿಯ ನಿರ್ಬಂಧ ಕಾಯಿದೆಗಳ ಜಾಗೃತಿಗಾಗಿ ಹಾಗೂ ಮಕ್ಕಳಲ್ಲಿ ಸಂತಸಮಯ, ಆರೋಗ್ಯದಾಯಕ, ಸದೃಢ ದೈಹಿಕ, ಮಾನಸಿಕ ಸ್ವಾಸ್ಥ್ಯ ಕಾಪಾಡುವ ಗುರುತರ ಹೊಣೆಗಾರಿಕೆಯನ್ನೂ ಎಲ್ಲಾ ಜನತೆ ಮತ್ತು ಸಂಸ್ಥೆಗಳಿಗೆ ತಿಳಿಸಲೆಂದು ವಿಶ್ವಸಂಸ್ಥೆ 1954ರ ನವೆಂಬರ್ 20 ರಂದು ಮಕ್ಕಳ ದಿನವಾಗಿ ಘೋಷಿಸಲಾಯಿತಾದರೂ ಹೆಚ್ಚು ವಿದೇಶಗಳು ಜೂನ್ 1 ರಂದು ಆಚರಿಸುವ ಮೂಲಕ ಮಕ್ಕಳ ಹಕ್ಕು ಹಾಗೂ ಅವರ ಕಲ್ಯಾಣದ ಬಗೆಗಿನ ಜಾಗೃತಿ ಹೆಚ್ಚಿಸುವಲ್ಲಿ ಪಾತ್ರವಹಿಸಿವೆ. ಮಕ್ಕಳ ಹಕ್ಕು ಹಾಗೂ ಕಲ್ಯಾಣದ ಜೊತೆಗೆ ಕಡ್ಡಾಯ ಶಿಕ್ಷಣವನ್ನು ಹೊಂದುವ ಹಕ್ಕಿನ ಬಗೆಗೂ ಇಂಬು ಕೊಟ್ಟಿದೆ. ಕೊರಿಯಾ ದೇಶವು ಮಕ್ಕಳ ಸಾಹಿತಿ ಪಾಂಗ್ ಚಾಂಗ್ ಹ್ವಾನ್‌ರವರ ನೆನಪಿನಲ್ಲಿ 1923ರಿಂದಲೂ ಮಕ್ಕಳ ಸ್ವಾತಂತ್ರ್ಯದ ಸದುಪಯೋಗಕ್ಕಾಗಿ ಪ್ರಾಮುಖ್ಯತೆ ನೀಡಿದರೆ ಜಪಾನ್ ಕೂಡ ಮಕ್ಕಳ ಸಂತಸದ ಬೆಳವಣಿಗೆಗೆ ಅರಿವು ನೀಡುತ್ತಾ ಅದೇ ಮೇ 5 ರಂದೇ ಆಚರಿಸಿಕೊಳ್ಳುತ್ತಿರುವುದೂ ಮತ್ತೊಂದು ವಿಶೇಷವಾಗಿದೆ.

ವಿವಿಧ ಆಚರಣೆಗಳು ಇಂದು ಅಂತಹ ಸತ್ವ ಕಳೆದುಕೊಂಡು ಅಗ್ಗದ ಪ್ರಚಾರ ಹಾಗೂ ವೈಭವದ ಆಡಂಬರಗಳಿಗೆ ಮನ್ನಣೆ ಕೊಟ್ಟಿದೆ. ತೋರಿಕೆ ಹಾಗೂ ದಾಖಲೆ ನಿರ್ವಹಣೆ, ಹಣ ಗಳಿಕೆಗೆ ಅವಕಾಶವೀಯುತ್ತಾ ಸಂಘಸಂಸ್ಥೆಗಳು ತನ್ನ ಧ್ಯೇಯೋದ್ದೇಶಗಳನ್ನೂ ಮರೆತಂತಿದೆ. ಇಂತಹ ಸನ್ನಿವೇಶದಲ್ಲಿ ಸಮಾಜದ ಅತೀ ಚಿಕ್ಕ ಘಟಕವೆನಿಸಿರುವ ಕುಟುಂಬವನ್ನು ಒಳಗೊಂಡಂತೆ ನೆರೆಹೊರೆ ಗ್ರಾಮಗಳು, ಸಮಾಜದ ವಿವಿಧ ಖಾಸಗಿ, ಅನುದಾನಿತ, ಅನುದಾನರಹಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಇಂದಿನ ವಿದ್ಯಾರ್ಥಿಗಳು ಮುಂದಿನ ಪ್ರಜೆಗಳು ಎಂಬ ತತ್ವದಡಿಯಲ್ಲಿ ಮಕ್ಕಳನ್ನು ಸನ್ಮಾರ್ಗದತ್ತ ಕೊಂಡೊಯ್ಯಬೇಕಿದೆ.

ನವೆಂಬರ್ 2018ರ 14 ರಂದು ನಾವೆಲ್ಲರೂ ಆಚರಿಸುವ ಮಕ್ಕಳ ದಿನಾಚರಣೆಯನ್ನು ಪೂರ್ವ ಪ್ರಧಾನಿಮಂತ್ರಿ ಜವಾಹರ್ ಲಾಲ್ ನೆಹರುರವರ ಜನ್ಮದಿನಾಚರಣೆಯ ಪ್ರಯುಕ್ತ ಆಚರಿಸುವಾಗ ನಾವೆಲ್ಲರೂ ಗಮನಿಸಬೇಕಾದ ಅಂಶಗಳು ಕೆಲವೊಂದಿವೆ. ಮಕ್ಕಳೆಲ್ಲರಿಂದ ಪ್ರೀತಿಯಿಂದ ಚಾಚಾ ಎಂದು ಕರೆಸಿಕೊಂಡಿರುವ ನೆಹರೂರವರ ಜನ್ಮ ದಿನಾಚರಣೆಯನ್ನು ಅರ್ಥವತ್ತಾಗಿ ಆಚರಿಸಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಶಾಲಾಕಾಲೇಜುಗಳಲ್ಲಿ ಈ ಕೆಳಗೆ ಸೂಚಿಸಿದ ಕಾರ್ಯಕ್ರಮಗಳ ಅನುಷ್ಠಾನದೊಂದಿಗೆ ಮಕ್ಕಳ ದಿನಾಚರಣೆಯನ್ನು ಹೆಚ್ಚು ಅರ್ಥವತ್ತಾಗಿಸಿಕೊಳ್ಳಬೇಕಿದೆ.

1. ಪಠ್ಯವಸ್ತು, ಪಠ್ಯಕ್ರಮಗಳಲ್ಲಿ ನೈತಿಕತೆಗೆ ಒತ್ತುನೀಡುವ 2005ರ ರಾಷ್ಟ್ರೀಯ ಪಠ್ಯಕ್ರಮದ 84 ಮೌಲ್ಯಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರುವುದು.
2. ವಿವಿಧ ಮೌಲ್ಯಗಳಿರುವ ಪದ್ಯ, ಗದ್ಯಗಳಿಗೆ, ಜೀವನ ಚರಿತ್ರೆ ಅಳವಡಿಕೆಗೆ ಒತ್ತುನೀಡುವುದು.
3. ರಾಷ್ಟ್ರೀಯ ನಾಯಕರ ಆದರ್ಶಗಳನ್ನು ಪಠ್ಯದಲ್ಲಿ ಅಳವಡಿಸುವುದು. ಬದುಕಿಗು ಬರಹಕ್ಕು ಹತ್ತಿರವಾದ ಜೀವನ ಚರಿತ್ರೆಯನ್ನು ಆಯ್ದುಕೊಳ್ಳಬೇಕಾದುದು ಬಹುಮುಖ್ಯ.
4. ಮಗುವು ಎಲ್ಲವನ್ನು ಗಮನಿಸುತ್ತದೆ ಎಂಬುದನ್ನು ಅರಿತು ತಮ್ಮ ನಡವಳಿಕೆಯನ್ನು ನಿರ್ವಹಿಸುವುದು ಪೋಷಕರ, ಹಿರಿಯರ, ಗುರುಗಳ ಆದ್ಯಕರ್ತವ್ಯವೂ ಹಾಗೂ ಜವಾಬ್ದಾರಿಯೂ ಹೌದು. ಇಂತಹ ಸಂದರ್ಭದಲ್ಲಿ ಸರ್ಕಾರವನ್ನು ಬದಿಗಿರಿಸಿ ಉಳಿದಂತೆ ಸಂಘಸಂಸ್ಥೆಗಳು ಶಾಲಾ ಸಂಸ್ಥೆಗಳು ಅತಿ ವಿಧೇಯ ವಿದ್ಯಾರ್ಥಿಗಳು, ಸಮಯ ಪ್ರಜ್ಞೆ ಮೆರೆದ ಮಕ್ಕಳು, ಸಾಹಸಿ ವಿದ್ಯಾರ್ಥಿಗಳು, ಸಮಾಜಸೇವಾ ಮನೋಭಾವ ಹೊಂದಿರುವ ವಿದ್ಯಾರ್ಥಿಗಳು ಎಂಬ ವಿಭಾಗಗಳಲ್ಲಿ ವಿಭಜಿಸಿ ಗೌರವಿಸಿ, ಬಹುಮಾನ ನೀಡುವುದು. ಸನ್ನಡತೆಗೆ ಪ್ರೋತ್ಸಾಹವಿತ್ತಂತೆ ರಾಷ್ಟ್ರಪತಿ ಕ್ಷಮಾದಾನದಿಂದ ಉತ್ತಮ ಖೈದಿಗಳು ಬಿಡುಗಡೆ ಹೊಂದುವ ರೀತಿಯಲ್ಲೇ ಬಾಲಾಪರಾಧ ಅನುಭವಿಸುತ್ತಿರುವ ಮಕ್ಕಳಿಗೂ ಕ್ಷಮೆ ನೀಡಿ ಸಮಾಜಮುಖಿಯನ್ನಾಗಿಸುವ ಜವಾಬ್ದಾರಿ ಎಲ್ಲ ಜವಾಬ್ದಾರಿಯುತ ಸರ್ಕಾರಕ್ಕೂ ಇರಬೇಕಿದೆ. ●

## 10 ವರ್ಷ ಶ್ರಮಿಸಿ ರೈತರು, ಪ್ರಾಣಿ ಸಂಕುಲಗಳಿಗಾಗಿ ಜಲಾಶಯ ನಿರ್ಮಿಸಿದ

ತನ್ನ ಅಜ್ಜಿಯ ಕನಸನ್ನು ಈಡೇರಿಸುವ ಸಲುವಾಗಿ ಛತ್ತೀಸ್‌ಗಢದ ದಂತೇವಾಡ ಜಿಲ್ಲೆಯ ವ್ಯಕ್ತಿಯೊಬ್ಬರು 50 ಮೀಟರ್ ಉದ್ದದ ಜಲಾಶಯವನ್ನು ನಿರ್ಮಿಸಿ ರೈತರಿಗೆ, ಜೀವ ಸಂಕುಲಗಳಿಗೆ ನೀರಿನ ಆಶ್ರಯ ನೀಡಿದ್ದಾರೆ. ಗದಪಲ ಗ್ರಾಮದ ಲಿಂಗರಾಮ್ ಮಾಡೊವಿ ಎಂಬುವವರು 10 ವರ್ಷಗಳ ಕಾಲ ನಿರಂತರವಾಗಿ ಶ್ರಮಪಟ್ಟು ಈ ಜಲಾಶಯವನ್ನು ನಿರ್ಮಾಣ ಮಾಡಿದ್ದಾರೆ. ದುವಾಲಿ ಕರ್ಕಾ ನದಿಯಿಂದ 300-400 ಮೀಟರ್ ಉದ್ದದ ತೋಡನ್ನು ತೋಡಿ ಜಲಾಶಯಕ್ಕೆ ನೀರು ಬರುವಂತೆ ಮಾಡಿದ್ದಾರೆ. ಇವರ ಅಜ್ಜಿಗೆ ಜಲಾಶಯ ನಿರ್ಮಾಣವಾಗಬೇಕೆಂಬ ಆಶಯವಿತ್ತು, ಆದರೆ ಅಧಿಕಾರಿಗಳು ಇದಕ್ಕೆ ಮುಂದೆ ಬಂದಿರಲಿಲ್ಲ, ಇದರಿಂದ ಬೇಸತ್ತ ಲಿಂಗರಾಮ್ ತಾವೇ ಸ್ವತಃ ಮುಂದೆ ಬಂದು ಆಕೆಯ ಕನಸನ್ನು ಈಡೇರಿಸಿದ್ದಾರೆ.

**ಕೃಪೆ : news13.in**

ಭೂರಮೆ

# ಸ್ತ್ರೀ ಸಶಕ್ತೀಕರಣದತ್ತ ಸರ್ಕಾರದ ಚಿತ್ತ



**ವರಲಕ್ಷ್ಮಿ**
**ಕಛೇರಿ ಕಾರ್ಯದರ್ಶಿ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**

ಸುಮಾರು ವರ್ಷಗಳಿಂದಲೂ ಸರ್ಕಾರಗಳು ಸ್ತ್ರೀ ಸಶಕ್ತೀಕರಣದ ಬಗ್ಗೆ ಹೇಳಿದ್ದೂ ಆಯಿತು, ಮೀಡಿಯಾಗಳಲ್ಲಿ ಅದರ ಪ್ರಚಾರದ ಮಿಂಚಿನ ಹೊಳೆಯನ್ನು ಹರಿಸಿದ್ದು ಆಯಿತು. ಆದರೆ ಸ್ತ್ರೀ ಸಶಕ್ತೀಕರಣ ಕೇಳುವುದಕ್ಕೆ ಮಾತ್ರ, ಕಾರ್ಯರೂಪಕ್ಕಲ್ಲ ಎಂದು ಮಹಿಳೆಯರು ಅದರ ಬಗ್ಗೆ ಮೌನ ತಾಳಿದ್ದರು. ಎಲ್ಲ ಕ್ಷೇತ್ರಗಳಲ್ಲೂ ಸ್ವತಃ ಶಕ್ತಿಯಿಂದ ಮುನ್ನುಗ್ಗಿ ಸಾಧಿಸುವ ಶಕ್ತಿಯಿದ್ದರೂ ಅವಕಾಶಗಳಿಲ್ಲದೆ ಚಿಂತಿಸಿ ಸುಮ್ಮನಾಗುವ ಸ್ಥಿತಿ ಈಗಿಲ್ಲ. ಮನೆಯಲ್ಲಿ ಒಬ್ಬ ಮಹಿಳೆ ವಿದ್ಯೆ ಕಲಿತರೇ ಆ ಮನೆಯೇ ಬೆಳಗುವುದು ಹಾಗೂ ದೇಶವೇ ಬೆಳಕಾಗುವುದು.

ಸ್ವತಂತ್ರಾನಂತರ ಅನೇಕ ಸರ್ಕಾರಗಳು ಬಂದು ಹೋದವು. ಪ್ರತಿ ಭಾಷಣದಲ್ಲೂ ಮಹಿಳಾ ಸಶಕ್ತೀಕರಣ ಒಂದು ವಿಷಯವಾಗಿರುತ್ತಿತ್ತು. ಅದು ಭಾಷಣಕ್ಕಷ್ಟೇ ಸೀಮಿತಗೊಳಿಸಿದ್ದು ಸಾಮಾನ್ಯವಾಗಿತ್ತು. ಆದರೆ ಪ್ರಸ್ತುತ ಕೇಂದ್ರ ಸರ್ಕಾರ ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗಿರುವುದು ನಮ್ಮ ನಾರಿಯರಲ್ಲಿ ಒಂದು ವಿಶೇಷ ಶಕ್ತಿ ಆವಾಹನೆಯಾದಂತಾಗಿದೆ. ಸರ್ಕಾರ ಸ್ತ್ರೀ ಸಶಕ್ತೀಕರಣದ ಬಗ್ಗೆ ಏನೇನು ಜಾರಿಮಾಡಿದೆ? ಎಂದು ತಿಳಿದು ಅದನ್ನು ಸದುಪಯೋಗ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗೋಣವೇ?

ಮನೆಯಲ್ಲಿ ಒಂದು ಗಂಡು ಮಗು ಜನಿಸಿದರೆ ಅದಕ್ಕೆ ಆ ಊರೇ ಸಂಭ್ರಮಿಸುವ ವಾತಾರವಣ ಮತ್ತು ಒಂದು ಹೆಣ್ಣುಮಗು ಜನಿಸಿದರೆ ಆ ಮಗುವಿನ ಬಗ್ಗೆ ತಾತ್ಸಾರ ಮಾತುಗಳನ್ನಾಡುವ ದಿನವೊಂದಿತ್ತು. ಈ ರೀತಿಯ ಮನೋಭಾವ ಕೆಲವು ಕಡೆ ಈಗಲೂ ಮುಂದುವರೆದಿದೆ. ಇದು ಏಕೆ? ಹೆಣ್ಣಲ್ಲವೇ ನಮ್ಮನ್ನೆಲ್ಲ ಪೊರೆದವಳು.

ಇದೆಲ್ಲವನ್ನೂ ನೋಡಿ ಸ್ತ್ರೀ ಸಶಕ್ತೀಕರಣದ ಬಗ್ಗೆ ಕೇವಲ ಮಾತನಾಡದೇ ಕಾರ್ಯರೂಪಕ್ಕೆ ತರುವಲ್ಲಿ "ಬೇಟಿ ಬಚಾವೋ ಬೇಟಿ ಪಢಾವೋ" ಆಂದೋಲನ ಶುರು ಮಾಡಿ ಇದರಡಿಯಲ್ಲಿ ಸುಕನ್ಯಾ ಸಮೃದ್ಧಿ ಯೋಜನೆಯೊಂದು ಜಾರಿಯಾಯಿತು. 10 ವರ್ಷದೊಳಗಿನ ಹೆಣ್ಣು ಶಿಶುವಿನ ಹೆಸರಿನಲ್ಲಿ ಅಂಚೆ ಕಛೇರಿಗಳಲ್ಲಾಗಲೀ, ಬ್ಯಾಂಕ್‌ಗಳಲ್ಲಾಗಲೀ ಖಾತೆ ತೆರೆದು 250 ರೂಗಳಿಂದ 1.5 ಲಕ್ಷಕ್ಕೆ ಮೀರದಂತೆ ವಾರ್ಷಿಕ ಕಂತುಗಳಲ್ಲಿ ಕಟ್ಟಬಹುದಾಗಿದೆ. ಮಗುವಿಗೆ 21 ವರ್ಷವಾಗುವ ಹೊತ್ತಿಗೆ ಆ ಖಾತೆ Maturity ಗೆ ಬರುತ್ತದೆ. 8.1% ವಾರ್ಷಿಕ ದರದಲ್ಲಿ ಬಡ್ಡಿ ನೀಡಲಾಗುವುದು. ಮಗುವಿಗೆ 18 ವರ್ಷವಾದಾಗ 50% ಹಣವನ್ನು ಹಿಂಪಡೆಯಲು ಅವಕಾಶವಿದೆ. ಅಲ್ಲಿಯವರೆಗೆ ಪಾಲಕರೇ ಆ ಖಾತೆಯನ್ನು ವ್ಯವಹರಿಸಬಹುದಾಗಿದೆ. ಖಾತೆಯನ್ನು ವಾಸಸ್ಥಳಕ್ಕೆ ಅನುಕೂಲವಾಗುವಂತೆ ಬ್ಯಾಂಕುಗಳಿಂದ ಪೋಸ್ಟ್ ಆಫೀಸಿಗೆ ಅಥವಾ ಮತ್ತೊಂದು ಬ್ಯಾಂಕ್‌ಗೆ ವರ್ಗಾವಣೆ ಮಾಡುವ ಅವಕಾಶವಿದೆ. Maturity ಗೆ ಬಂದ ನಂತರವೂ ಹಣವನ್ನು ಹಿಂಪಡೆಯದೇ ಇದ್ದರೆ ಆ ಮೊತ್ತವು ಬಡ್ಡಿಯನ್ನು ಗಳಿಸುತ್ತಲೇ ಹೋಗುತ್ತದೆ. ಕುಟುಂಬಕ್ಕೆ ಹೆಣ್ಣು ಭಾರವೆನಿಸಿದರೆ ಆ ಭಾರವನ್ನು ಹೊರಲು ಕೇಂದ್ರ ಸರ್ಕಾರವೂ ಕೈಜೋಡಿಸುತ್ತದೆ.

ಹೆಣ್ಣು ಮಗು ಅಪ್ರಾಪ್ತ ವಯಸ್ಸಿನಲ್ಲಿ ಅತ್ಯಾಚಾರಕ್ಕೆ ಒಳಗಾದರೂ ಆ ದುಃಖ ಸಮಾಜದ್ದೇ ಆಗಿದ್ದರೂ ಒಂದು ನಿಮಿಷ ಮೌನಕ್ಕೆ ಜಾರಿ ಸುಮ್ಮನಾಗಿಬಿಡುತ್ತದೆ. ಆದರೆ ಈಗ ಹಾಗಿಲ್ಲ. 12 ವರ್ಷದೊಳಗಿನ ಬಾಲಕಿಯ ಮೇಲೆ ಅತ್ಯಾಚಾರವಾದದ್ದು ಸಾಬೀತಾದರೆ ಮರಣ ದಂಡನೆ ವಿಧಿಸುವ ಹಾಗೂ 16 ವರ್ಷದೊಳಗಿನ ಮಕ್ಕಳ ಮೇಲೆ ಅತ್ಯಾಚಾರವಾದರೆ ಆರೋಪಿಗೆ ಜಾಮೀನು ಸಿಗದಂತೆ ಶಿಕ್ಷೆಗೊಳಪಡಿಸುವ (10 ವರ್ಷ ಜೈಲು ಶಿಕ್ಷೆ) ಕಾನೂನಾತ್ಮಕ ನೀತಿ ಜಾರಿಗೆ ಬಂದಿದೆ. ತನಿಖೆಗೆ 2 ತಿಂಗಳು ಗಡುವಿದ್ದು ಇದಕ್ಕಾಗಿ ಹೊಸ ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳು ಹಾಗೂ ಪ್ರಾಸಿಕ್ಯೂಟರುಗಳನ್ನು ಮೀಸಲಿಡಲಾಗಿದೆ. ತಪ್ಪು ಮಾಡಿದವ ತಪ್ಪಿಸಿಕೊಳ್ಳಲು ಅವಕಾಶವಿಲ್ಲದಂತಾಗಿದೆ. ದೇಶದಲ್ಲಿ ಅತ್ಯಾಚಾರಿಗಳಿಗೆ ಗರ ಬಡಿದಂತಾಗಿ ಜೀವ ಉಳಿಸಿಕೊಂಡರೆ ಸಾಕಪ್ಪ ಎಂಬ ಭಯಹುಟ್ಟಿಸಿದೆ ಈ ಕಾನೂನು.

ಸೌದೆಯಲ್ಲಿ ಅಡಿಗೆ ಮಾಡುವ ಮಹಿಳೆಯರ ಸ್ಥಿತಿ ಚಿಂತಾಜನಕವಾಗಿತ್ತು. ಸೌದೆಗಳನ್ನು ಬಳಸಿ ಅದರ ಹೊಗೆಯನ್ನು ಕುಡಿದು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದ ಸುದ್ದಿ ಮೊನ್ನೆ ಮೊನ್ನೆಯು ಓದಿದಂತಿದೆ. ಆದರೆ ಕೇಂದ್ರ ಸರ್ಕಾರ ಈ ಮಹಿಳೆಯರ ದುಸ್ಥಿತಿ ನೋಡಿಯೇ ಗ್ಯಾಸ್ ಒಲೆ, ಸಿಲಿಂಡರ್ ತಲುಪುವಂತೆ ಮಾಡಿದೆ. ಅಡಿಗೆ ಮಾಡಲು ಹೊಗೆ ಮುಕ್ತಗೊಳಿಸಿದ್ದಲ್ಲದೆ ಸಮಯವೂ ಕೂಡ ಉಳಿತಾಯವಾಗಿ ಮಹಿಳೆ ಬೇರೆ ಕೆಲಸದಲ್ಲೂ ತೊಡಗಿಕೊಳ್ಳಲು ಅವಕಾಶ ಸಿಕ್ಕಂತಾಗಿದೆ. ಆರೂವರೆ ಕೋಟಿ ಕುಟುಂಬಗಳು ಹೊಗೆ ಮುಕ್ತವಾಗಿದೆ.

ಸ್ವಚ್ಛಭಾರತ್ ಯೋಜನೆಯಡಿ ಇಲ್ಲಿಯವರೆಗೆ 4 ಲಕ್ಷಕ್ಕೂ ಅಧಿಕ ಗ್ರಾಮಗಳಿಗೆ ಬಯಲು ಶೌಚ ಮುಕ್ತಗೊಳಿಸಿದೆ. ಇದರಿಂದ ಮಹಿಳೆಯರಿಗೆ ಬಹಳ ಸಹಾಯಕವಾಗಿದೆ. ಜೊತೆಗೆ ಪರಿಸರವೂ ಸ್ವಚ್ಛಗೊಂಡಿದೆ.

ಮಹಿಳೆಯರಿಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಲೆಂದು ಸ್ವ-ಉದ್ಯೋಗ ಮತ್ತು ಹಲವು ಉದ್ಯೋಗ ಮೂಲಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಮುದ್ರಾ ಯೋಜನೆಯಡಿಯಲ್ಲಿ ಶಿಶು, ಕಿಶೋರ್, ತರುಣ್ ಎಂಬ ಮೂರು ಮುದ್ರಾ ಯೋಜನೆಯನ್ನು ಜಾರಿಗೊಳಿಸಿದೆ. ಇದರಿಂದ 50 ಸಾವಿರದಿಂದ 10 ಲಕ್ಷದವರೆಗೆ ಎಲ್ಲಾ ದರ್ಜೆಯ ಮಹಿಳೆಯರಿಗೂ (ಯುವಕರಿಗೂ) ಸಾಲ ಸಿಗುತ್ತದೆ. ಇದನ್ನು ಮೂರು ವಿಧವಾಗಿ ವಿಂಗಡಿಸಿ ಅವರವರ ವ್ಯವಹಾರ ವ್ಯಾಪಾರದ ಆಧಾರದ ಮೇಲೆ ಸಾಲವನ್ನು ಪಡೆಯಬಹುದು. ಈ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆಯಬಹುದಾಗಿದ್ದು ನೀವು ಆ ಬ್ಯಾಂಕ್‌ನಲ್ಲಿ ಖಾತೆದಾರರಾಗಿರಬೇಕು ಅಷ್ಟೆ.

**1. ಶಿಶು :** ಸಣ್ಣ ಪುಟ್ಟ ವ್ಯವಹಾರವನ್ನು ಮಾಡುವವರು ಈ ಶಿಶು

**ಪುಟ 9 ಕ್ಕೆ ➤**

➢ ಪುಟ 8 ರಿಂದ..... ಸ್ತ್ರೀ ಸಶಕ್ತೀಕರಣ...

ಮುದ್ರಾ ಸಾಲವನ್ನು ಪಡೆಯಬಹುದು. ಇದರಲ್ಲಿ 50 ಸಾವಿರದವರೆಗೆ ಸಾಲವನ್ನು ಪಡೆಯಬಹುದು. ಹೊಲಿಗೆ, ಹೂವು, ಹಣ್ಣಿನ ಅಂಗಡಿ, ಚಿಲ್ಲರೆ ಅಂಗಡಿ, ಆಹಾರ ತಯಾರು ಮುಂತಾದ ಯಾವುದೇ ಸಣ್ಣಪುಟ್ಟ ವ್ಯವಹಾರಕ್ಕೆ ಸಾಲವನ್ನು ಪಡೆಯಬಹುದು.

**2. ಕಿಶೋರ್ ಸಾಲ:** ಬಂಡವಾಳ ಹೆಚ್ಚು ಬೇಕಾಗುವ ಹೋಟೆಲ್, ದಿನಸಿ ಅಂಗಡಿ, ಜೆರಾಕ್ಸ್, ಜವಳಿ, ಬ್ಯೂಟಿಪಾರ್ಲರ್ ಮುಂತಾದ ವ್ಯವಹಾರಗಳಿಗೆ 50 ಸಾವಿರದಿಂದ 5 ಲಕ್ಷದ ವರೆಗೆ ಈ ಸಾಲವನ್ನು ಪಡೆಯಬಹುದಾಗಿದೆ.

**3. ತರುಣ್ ಯೋಜನೆ :** ಇದರಡಿಯಲ್ಲಿ ದೊಡ್ಡ ಉದ್ಯಮಗಳನ್ನು ಮಾಡುವವರು 5 ಲಕ್ಷದಿಂದ 10 ಲಕ್ಷದವರೆಗೆ ಸಾಲ ಸೌಲಭ್ಯವನ್ನು ಪಡೆಯಬಹುದು.

ಈ ಸಾಲವನ್ನು ಪಡೆಯಲು ಹೆಚ್ಚು ಕಷ್ಟವೇನೂ ಇಲ್ಲ. ಬೇಕಾದವರು ಮುಕ್ತವಾಗಿ ಸಾಲವನ್ನು ಪಡೆಯಬಹುದು. ನಿಮ್ಮ ಓಟರ್ ಐಡಿ ಅಥವಾ ಆಧಾರ್ ಕಾರ್ಡ್, ವಾಸಸ್ಥಳ ಪ್ರಮಾಣಪತ್ರ, ನಿಮ್ಮ ಭಾವಚಿತ್ರ, ಆ ಬ್ಯಾಂಕಿನ ಪಾಸ್‌ಬುಕ್ ಮತ್ತು ಪ್ರಾರಂಭಿಸಿದ ನಂತರ ಕಡ್ಡಾಯವಾಗಿ ಜಿಎಸ್‌ಟಿ ಸಂಖ್ಯೆ ಹಾಗೂ ನೀವು ಪ್ರಾರಂಭಿಸುವ ವ್ಯವಹಾರದ ಅಂದಾಜು ವೆಚ್ಚಪಟ್ಟಿಯನ್ನು ಹಾಗೆ ಬ್ಯಾಂಕ್‌ನವರು ಕೇಳಿದ ಮಾಹಿತಿ ಕೊಟ್ಟರೆ ಅದರ ಆಧಾರದ ಮೇಲೆ ನಿಮಗೆ ಈ ಮೂರು ವಿಧದ ಸಾಲದಲ್ಲಿ ಯಾವುದು ಬೇಕಾಗಬಹುದೆಂದು ಬ್ಯಾಂಕ್‌ನವರಿಂದಲೇ ಮಾಹಿತಿ ಸಿಗುತ್ತದೆ. ಇದರಿಂದ 2014ದಿಂದೀಚೆಗೆ 45 ಲಕ್ಷ ಮಹಿಳಾ ಸ್ವ ಸಹಾಯ ಸಂಘಗಳು ಅನುಷ್ಠಾನಕ್ಕೆ ಬಂದಿದ್ದು ಅದರಿಂದ 5 ಕೋಟಿ ಮಹಿಳೆಯರು ಉದ್ಯೋಗಸ್ಥರಾಗಿದ್ದಾರೆ.

ಈಗ ನಮ್ಮ ದೇಶದಲ್ಲಿ ಮಹಿಳಾ ಸ್ವಾಟ್ ಫೋರ್ಸ್ (SWAT force) ಸಿದ್ಧವಾಗಿದ್ದು 36 ಮಹಿಳೆಯರ ಪಡೆ ಇದರಲ್ಲಿದ್ದು ಇವರಿಗೆ 15 ತಿಂಗಳುಗಳ ಕಾಲ ಕಠಿಣ ತರಬೇತಿಯನ್ನು ನೀಡಲಾಗಿದೆ. ಮಹಿಳೆಯರು ಮಾತ್ರವಿರುವ ಮೊದಲ ತಂಡವಿದು. ಮಹಿಳೆ ದೇಶ ರಕ್ಷಣೆ ಮಾಡುವ ಮೆಟ್ಟಿಲು ಹತ್ತುವ ಸಾಹಸ ಮಾಡಿದ್ದಾಳೆಂದರೆ ಇದರ ಹಿಂದೆ ಕೇಂದ್ರ ಸರ್ಕಾರ ಬೆನ್ನೆಲುಬಾಗಿ ನಿಂತಿದೆ.

ಮುಸ್ಲಿಂ ಮಹಿಳೆಯರಿಗೆ ಕಂಟಕವಾಗಿ ಕಾಡುತ್ತಿದ್ದ ತ್ರಿವಳಿ ತಲಾಖ್. ಮುಸ್ಲಿಂ ಹೆಣ್ಣುಮಕ್ಕಳು ಜೀವಿತಾವಧಿಯವರಿಗೂ ಭಯದಿಂದಲೇ ಬದುಕಬೇಕಾಗಿ, ನರಕಯಾತನೆಯನ್ನು ಅನುಭವಿಸುತ್ತಿದ್ದರು. ಇದಕ್ಕೆಲ್ಲ ಪರಿಹಾರವೆಂಬಂತೆ ಕೇಂದ್ರ ಸರ್ಕಾರ ತಲಾಖ್ ಚರ್ಚೆಗೆ ವೇದಿಕೆ ಒದಗಿಸಿದೆ. ಅದರ ಜೊತೆಗೆ ಸರ್ವೋಚ್ಛ ನ್ಯಾಯಾಲಯವು ತ್ರಿವಳಿ ತಲಾಖ್‌ನ್ನು ಅಸಿಂಧುಗೊಳಿಸಿದೆ. ಹಾಗೆಯೇ ನಿಖಾ ಹಲಾಲಾ ಬಗ್ಗೆಯು ಚರ್ಚೆ ನಡೆಯುತ್ತಿದೆ.

ಮಹಿಳೆಯರು ಎಲ್ಲಿಯವರೆಗೆ ಪರಾವಲಂಬಿಗಳಾಗಿರುತ್ತಾರೋ ಅಲ್ಲಿಯವರೆಗೆ ದೌರ್ಜನ್ಯ ತಾಂಡವವಾಡುತ್ತದೆ. ಅದನ್ನು ಮೆಟ್ಟಿನಿಂತು ಸ್ವಾವಲಂಬಿಯಾಗಿ ಸುಸಂಸ್ಕೃತ ಸಮಾಜ, ಸ್ವಚ್ಛ ಪರಿಸರ, ಭ್ರಷ್ಟಾಚಾರ ರಹಿತ ರಾಷ್ಟ್ರ ಕಟ್ಟುವಲ್ಲಿ ಕೈಜೋಡಿಸಬೇಕು. ಏಳಿ, ಎದ್ದೇಳಿ ಗುರಿಮುಟ್ಟುವರೆಗೂ ನಿಲ್ಲದಿರಿ ಎಂಬ ವಿವೇಕಾನಂದರ ವಾಣಿಯಂತೆ ನಡೆದು ತೋರಿಸೋಣವೇ?

●

# ದೈಹಿಕ ಶಿಕ್ಷಕರ ಕಾರ್ಯಾಗಾರ

ದಿನಾಂಕ 30/09/2018ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ರಾಜ್ಯಮಟ್ಟದ ದೈಹಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ವಿರೂಪಾಕ್ಷ ಅವರು ಸಮಗ್ರ ವೈದ್ಯನಾಥನ್ ವರದಿ ಮತ್ತು ದೈಹಿಕ ಶಿಕ್ಷಣ ಕುರಿತು ವಿಶೇಷ ಉಪನ್ಯಾಸ ನೀಡಿದರು. ಶ್ರೀ ಅರುಣ ಶಹಾಪೂರ ಅವರು ಶಿಕ್ಷಕರ ಸಮಸ್ಯೆಗಳ ಕುರಿತು ಚರ್ಚಿಸಿದರು ಮತ್ತು ಈ ವೇದಿಕೆಯ ಮುಖಾಂತರ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಂತೆ ಮಾರ್ಗದರ್ಶನ ನೀಡಿದರು. ಈ ಕಾರ್ಯಕ್ರಮದಲ್ಲಿ ಶ್ರೀ ಕೃ. ನರಹರಿ ಜಿ , ಶ್ರೀ ಸಂದೀಪ ಬೂದಿಹಾಳ, ಅರುಣ ಶಹಾಪುರ, ಶ್ರೀ ಶಿವಾನಂದ ಸಿಂಧನಕೇರಾ, ಶ್ರೀ ಚಿದಾನಂದ ಪಾಟೀಲ, ಶ್ರೀ ಗಂಗಾಧರ್ ಹಾಗೂ ದೈಹಿಕ ಶಿಕ್ಷಕ ಸಂಘದ ಶ್ರೀನಿವಾಸಗೌಡರು ಮತ್ತು ವಿವಿಧ ಜಿಲ್ಲೆಗಳಿಂದ ಸುಮಾರು 125 ಸಂಖ್ಯೆ ದೈಹಿಕ ಶಿಕ್ಷಕರು ಭಾಗವಹಿಸಿದ್ದರು. ಮಾಧ್ಯಮಿಕ ಶಿಕ್ಷಕ ಸಂಘದ ದೈಹಿಕ ಶಿಕ್ಷಣ ರಾಜ್ಯ ಸಂಚಾಲರಾಗಿ ಶ್ರೀಸುರೇಂದ್ರ ಅವರನ್ನು ಮತ್ತು ಸಹ ಸಂಚಾಲಕರಾಗಿ ಶ್ರೀ ಮಹೇಶ ರುದ್ರಗೌಡ ಬಸರಕೋಡ ಅವರಿಗೆ ಜವಾಬ್ದಾರಿ ವಹಿಸಲಾಯಿತು.

**ವರದಿ : ಮಹೇಶ್ ಬಸರಕೋಡ್**

# ಬಡವರ ನೀರಿನ ಬವಣೆ ನೀಗಿಸಿದ ಬಾಲಕಿ

ಗುರುಗ್ರಾಮದ 15 ವರ್ಷದ ಬಾಲಕಿಯೊಬ್ಬಳ ಚಿಂತನೆಯ ಫಲವಾಗಿ ಇಂದು ಗುರುಗ್ರಾಮ ಸಂಸ್ಥೆಯೊಂದರಲ್ಲಿ ಆಶ್ರಯವನ್ನು ಪಡೆದುಕೊಂಡಿರು 500 ನಿರ್ಗತಿಕ, ಬಡ ಜನರ ನೀರಿನ ಬವಣೆ ನೀಗಿ, ನಿತ್ಯ 10 ಸಾವಿರ ಲೀಟರ್ ನೀರು ಅವರಿಗೆ ದೊರೆಯುವಂತಾಗಿದೆ.

ಪಾಥ್‌ವೇಸ್ ಸ್ಕೂಲ್ ವಿದ್ಯಾರ್ಥಿಯಾಗಿರುವ ತವಿಶಿ, ಸುಮಾರು 500 ಮಂದಿ ನಿರ್ಗತಿಕರು ಆಶ್ರಯ ಪಡೆದುಕೊಂಡಿರುವ ಅರ್ತ್ ಸೇವಿಯರ್ಸ್ ಫೌಂಡೇಶನ್‌ನಲ್ಲಿ ಮಳೆ ನೀರು ಕೊಯ್ಲು ಯೋಜನೆಯನ್ನು ಅಳವಡಿಸಿದ್ದರು. ಇದರಿಂದಾಗಿ ನಿತ್ಯ ಇಲ್ಲಿನ ಜನರಿಗೆ 10 ಸಾವಿರ ಲೀಟರ್ ನೀರು ಸಿಗುತ್ತಿದೆ. ಕೆಟ್ಟೋ ಎಂಬ ಫಂಡ್ ರೈಸಿಂಗ್ ವೇದಿಕೆಯನ್ನು ಸ್ಥಾಪಿಸಿ, ಅದರಿಂದ ಸುಮಾರು 2 ಲಕ್ಷದವರೆಗೆ ಹಣವನ್ನು ಸಂಗ್ರಹಿಸಿ ಅವರು ಈ ಸಂಸ್ಥೆಯಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಿದ್ದರು. ಆಕೆಯ ಶಾಲೆ ಮತ್ತು ಸಂಸ್ಥೆಯ ಬೆಂಬಲವೂ ಆಕೆಗೆ ದೊರಕಿತ್ತು.

ಚೆನ್ನೈನ ರೈನ್ ಮ್ಯಾನ್ ಎಂದು ಖ್ಯಾತಿ ಪಡೆದಿರುವ ಶೇಖರ್ ರಾಘವನ್ ಆಕೆಗೆ ತನ್ನ ಐಡಿಯಾವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರಲು ಸಹಕರಿಸಿದರು. ಎಂಜಿನಿಯರ್‌ಗಳು, ಪೊಲೀಸ್ ಅಧಿಕಾರಿಗಳೂ ಆಕೆಗೆ ಬೆನ್ನೆಲುಬಾಗಿ ನಿಂತರು. ಆಕೆಯ ಪರಿಶ್ರಮದ ಫಲವಾಗಿ ಹರಿದು ವ್ಯರ್ಥವಾಗುತ್ತಿದ್ದ ನೀರು, ಸೇವಿಯರ್ಸ್ ಫೌಂಡೇಶನ್ ಆವರಣದಲ್ಲಿ ಇಂಗಿ ಅಲ್ಲಿನ ಜನರ ಉಪಯೋಗಕ್ಕೆ ಸಿಗುತ್ತಿದೆ.

**ಕೃಪೆ : news13.in**



# ವಾಲ್ಮೀಕಿ ಎಂಬ ಮಹಾಚೇತನ

■ ಶ್ರೀಮತಿ ರೇಣುಕಾ ಹಂಗನಳ್ಳಿ
ಸಹಶಿಕ್ಷಕಿ

**ಕೂಜಂತಂ ರಾಮ ರಾಮೇತಿ ।**
**ಮಧುರ ಮಧುರಾಕ್ಷರಂ ಆರುಹ್ಯ ಕವಿತಾಶಾಖಾಂ ।**
**ವಂದೇ ವಾಲ್ಮೀಕಿ ಕೋಕಿಲಮ್॥**

ಈ ಸುಂದರವಾದ ರೂಪಕಾಲಂಕಾರದಿಂದ ಕೂಡಿದ ವಾಲ್ಮೀಕಿ ಮುನಿಯನ್ನು ವಂದಿಸುವ, ನಮಸ್ಕರಿಸುವ ಶ್ಲೋಕವು ಬುಧಕೌಶಿಕ ಮುನಿಯು ರಚಿಸಿರುವ ಶ್ರೀರಾಮರಕ್ಷಾ ಸ್ತೋತ್ರದಲ್ಲಿದೆ. ಕಾವ್ಯವೆಂಬ ಮರದ ಮೇಲೆ ಕುಳಿತು ರಾಮ, ರಾಮಾ ಎಂದು ಹಾಡುತ್ತಿರುವ ವಾಲ್ಮೀಕಿ ಎಂಬ ಕೋಗಿಲೆಗೆ ನಮಸ್ಕಾರ.

ವಾಲ್ಮೀಕಿ ಮಹರ್ಷಿ ಜಯಂತಿಯನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ವಾಲ್ಮೀಕಿ ಮಹರ್ಷಿಗಳ ಕುರಿತು ತಿಳಿಯುವ ಹಾಗೂ ಎಲ್ಲರಿಗೂ ತಿಳಿಸುವ ಯೋಗ್ಯವಾದ ಸಂದರ್ಭ. ಪ್ರತಿಯೊಬ್ಬ ಭಾರತೀಯನಿಗೆ ತಿಳಿದಿರುವ ಸಾಮಾನ್ಯ ವಿಷಯ ವಾಲ್ಮೀಕಿ ಮಹರ್ಷಿಗಳ ಹಿನ್ನೆಲೆ, ವಾಲ್ಮೀಕಿಯ ಜೀವನದ ಕುರಿತಾಗಿ ಅನೇಕ ದಂತ ಕಥೆಗಳಿವೆ. ಅದರಲ್ಲಿ ಒಂದು ಕಥೆಯ ಪ್ರಕಾರ, ವಾಲ್ಮೀಕಿ ಋಷಿಯಾಗುವ ಮೊದಲು 'ರತ್ನಾಕರ' ಎಂಬ ಹೆಸರಿನ ಒಬ್ಬ ಡಕಾಯಿತನಾಗಿದ್ದನು. ಕಾಡಿನ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರನ್ನು ದೋಚಿ ಜೀವನ ನಡೆಸುತ್ತಿದ್ದನು. ಒಮ್ಮೆ ನಾರದ ಮುನಿಯಲ್ಲಿ ದರೋಡೆ ಮಾಡಲು ಹೋದಾಗ ನಾರದ ಮಹರ್ಷಿಯ ಉಪದೇಶದಿಂದ ರತ್ನಾಕರನಿಗೆ ಜ್ಞಾನೋದಯವಾಯಿತು. ಮುಂದೆ ಇದೇ ಡಕಾಯಿತ ರತ್ನಾಕರ ವಾಲ್ಮೀಕಿಯಾಗಿ ಬದಲಾದ ಎಂದು ಹೇಳಲಾಗುತ್ತದೆ. ಇನ್ನೊಂದು ಮೂಲದ ಪ್ರಕಾರ ವಾಲ್ಮೀಕಿ ಮಹರ್ಷಿಗಳು ಪ್ರಚೇತನ ಮುನಿಯ ಮಗ. ಅವರಿಗೆ 'ಪ್ರಚೇತನ' ಎಂಬ ಹೆಸರಿದೆ. ಪರಮಾತ್ಮನನ್ನು ಕುರಿತು ಬಹಳ ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದಾಗ ಅವರ ಸುತ್ತ ಹುತ್ತ ಬೆಳೆದಿತ್ತು. ಆದ್ದರಿಂದ ಅವರಿಗೆ ವಾಲ್ಮೀಕಿ ಎಂಬ ಹೆಸರು ಬಂತು. ಸಂಸ್ಕೃತದಲ್ಲಿ 'ವಾಲ್ಮೀಕಿ' ಎಂದರೆ ಹುತ್ತ ಎಂದರ್ಥ.

ಮೇಲಿನ ದಂತಕಥೆಗಳ ಆಧಾರದಿಂದ ವಾಲ್ಮೀಕಿ ಬದಲಾದ ಕಥೆಗಳನ್ನು ತಿಳಿಯಬಹುದು. ಇಲ್ಲಿ ಪ್ರಮುಖವಾಗಿ ತಿಳಿಯುವ ವಿಷಯು ಒಬ್ಬ ಕ್ರೂರ ದರೋಡೆಕೋರ ಮಹಾನ್ ಮಹರ್ಷಿಯಾಗಿ ಬದಲಾಗಿ ಜಗತ್ತಿಗೆ ಮಾದರಿಯಾದ, ಯುಗ ಯುಗಾಂತರಕ್ಕೂ ದಾರಿದೀಪವಾದ ಅದ್ಭುತ, ಮಹಾನ್ 'ರಾಮಾಯಣ'ವನ್ನು ರಚಿಸಿದ್ದು. ವಾಲ್ಮೀಕಿ ಮಹರ್ಷಿಯು ನಾರದರು ತಮಗೆ ಹೇಳಿದ್ದ ಸಂಗ್ರಹರೂಪದ ರಾಮನ ಕಥೆಯನ್ನು ವಾಲ್ಮೀಕಿ ಮಹರ್ಷಿಗಳು 24000 ಶ್ಲೋಕಗಳನ್ನೊಳಗೊಂಡ ಮಹಾಗ್ರಂಥವಾಗಿ ಬರೆದರು ಎಂಬುದು ತಿಳಿದ ವಿಷಯ. ಮಹಾ ಪುರುಷೋತ್ತಮ ರಾಮ, ಅಯೋಧ್ಯೆಯ ರಾಜನಾಗಿ ರಾಮನ ರಾಜನಿಷ್ಠೆ, ಒಬ್ಬ ಪತಿಯಾಗಿ ಸೀತೆಯ ಸೀತಾರಾಮನಾಗಿ ಅಣ್ಣನಾಗಿ, ಲಕ್ಷ್ಮಣ, ಭರತ, ಶತ್ರುಘ್ನರ ಮಾರ್ಗದರ್ಶಕನಾಗಿ, ತನ್ನ ಪರಮ ಭಕ್ತ ಶಿಷ್ಯ ಹನುಮಾನನ ದೈವನಾಗಿ, ಎಲ್ಲದಕ್ಕೂ ಮಿಗಿಲಾಗಿ ಮಗನಾಗಿ, ಮಾತಾ ಪಿತೃವಿನ ವಚನ ಪರಿಪಾಲಕನಾಗಿ ನಾವು ರಾಮನ ಚಿತ್ರ ಭಾವವನ್ನು ಎಂದೂ ಮರೆಯದಂತೆ ನಮ್ಮ ನಮ್ಮ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿಸಿಕೊಂಡಿದ್ದೇವೆ. ವಾಲ್ಮೀಕಿ ಮಹರ್ಷಿಯು ತನ್ನ ಶ್ಲೋಕಗಳಲ್ಲಿ ಒಬ್ಬ ಮಹಾನ್ ವ್ಯಕ್ತಿಯ ರೂಪದಲ್ಲಿ ಸಮಾಜ, ರಾಷ್ಟ್ರದ ಒಂದು ಅದ್ಭುತ ಚಿತ್ರಣವನ್ನು ಸರ್ವಕಾಲಕ್ಕೂ ಅನ್ವಯಿಸುವಂತೆ ರಚಿಸಿರುವುದು ವಿಸ್ಮಯ.

ಪ್ರಸ್ತುತ ಸಮಾಜ, ಕುಟುಂಬ, ವ್ಯಕ್ತಿ, ರಾಷ್ಟ್ರದ ಸ್ಥಿತಿಯನ್ನು ವಾಲ್ಮೀಕಿ ರಾಮಾಯಣಕ್ಕೆ ಹೋಲಿಸಿ ನೋಡಿದಾಗ ಒಂದು ಅವ್ಯಕ್ತ ಭಯ ಆವರಿಸುತ್ತದೆ. ಕಾರಣ ಇಂದಿನ ಪ್ರತಿಯೊಬ್ಬ ವ್ಯಕ್ತಿ, ಸಮಾಜ ಇದರ ವ್ಯತಿರಿಕ್ತ ದಾರಿಯಲ್ಲಿ ನಡೆಯುತ್ತಿದ್ದು ಯಾವ ರಾಮ ರಾಜ್ಯದ ಕಲ್ಪನೆಯನ್ನು ನಮ್ಮ ಪೂರ್ವಜರು ವಾಲ್ಮೀಕಿಯ ಶ್ಲೋಕಗಳ ಮೂಲಕ ಯುಗ ಯುಗಗಳಿಂದ ಸಾರುತ್ತಾ, ಪಾಲಿಸುತ್ತಾ ಬಂದಿರುವರೋ, ಅದರ ಕಲ್ಪನೆಯನ್ನು ಮೀರಿ ವಿರುದ್ಧ ದಿಕ್ಕಿನಲ್ಲಿ ನಾವು ನಡೆಯುತ್ತಿರುವುದು ಬೇಸರದ ಸಂಗತಿ. ಆಧುನಿಕ ಬೆಳವಣಿಗೆಯ ವೇಗದಲ್ಲಿ ನಮ್ಮ ಸಂಸ್ಕೃತಿ, ಬದುಕುವ ಸುಂದರ ಕ್ಷಣಗಳ ಅನುಭವವನ್ನು ಮೀರಿ, ಮೌಲ್ಯ, ನೀತಿ, ಆಚಾರ, ವಿಚಾರಗಳನ್ನು ಬಿಟ್ಟು ಕ್ಷಣಿಕ, ಲೌಕಿಕ ಸುಖದ ಹಿಂದೆ ನಾಗಲೋಟದಲ್ಲಿ ಓಡುತ್ತಿದ್ದೇವೆ. ಒಂದು ಕ್ಷಣ ನಿಂತು ಯೋಚಿಸಿದಾಗ ನಮ್ಮ ಸಂಸ್ಕೃತಿಯ ಭವ್ಯತೆ, ಅದರ ಆಳದಲ್ಲಿನ ಅದ್ಭುತಗಳನ್ನು ಕಂಡು ಅದನ್ನು ಉಳಿಸಿ, ಬೆಳೆಸಿ, ಪೋಷಿಸಿ, ಪಸರಿಸುವ ಅವಶ್ಯಕತೆ, ಅಗತ್ಯತೆ ಗೋಚರಿಸುತ್ತದೆ.

ವಾಲ್ಮೀಕಿ ಮಹರ್ಷಿಯನ್ನು ಕೇವಲ ಅವರ ರಾಮಾಯಣದ ರಚನೆಯ ದೃಷ್ಟಿಯಿಂದ ನೋಡದೆ ಪರಿಪೂರ್ಣ ಸಮಾಜ, ರಾಷ್ಟ್ರದ ನಿರ್ಮಾಣದ ದಾರಿಗೆ ಪ್ರಜ್ವಲಿಸುವ ದ್ವೀಪವಾಗಿ ದಾರಿ ತೋರಿಸುವ ಮಾರ್ಗದರ್ಶಕ, ಗುರು, ಅದ್ಭುತ ಚೇತನವಾಗಿ ಕಾಣಬಹುದಾಗಿದೆ.

●

# ರಾಷ್ಟ್ರೀಯ ದೈಹಿಕ ಶಿಕ್ಷಕರ ಕಾರ್ಯಾಗಾರ













# ರಾಜ್ಯ ಮಟ್ಟದ ಶಿಕ್ಷಕಿಯರ ಸಭೆ





MAG(3)/NPP/26/2018-19 Registered No. RNI 45459/85
Date of Publishing : 17-10-2018

Posted at Bangalore PSO Bangalore -560 026
Date of Posting 20h or 21st of every month

# ಪಿಂಚಣಿ ಯೋಜನೆ ಜಾರಿಗೊಳಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ

ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ವತಿಯಿಂದ ದಿನಾಂಕ 01.04.2006ರ ನಂತರ ವೇತನ ಪಡೆಯುತ್ತಿರುವ ಅನುದಾನಿತ ಶಾಲಾ ಕಾಲೇಜುಗಳ ನೌಕರರು ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸಿ, ಕಾಲ್ಪನಿಕ ವೇತನ ನಿಗದಿ ಮಾಡುವುದು ಹಾಗೂ ಹಳೆಯ ನಿಶ್ಚಿತ ಪಿಂಚಣಿ ಯೋಜನೆ ಜಾರಿಗೊಳಿಸಲು ಆಗ್ರಹಿಸಿ "ಬೃಹತ್ ಪ್ರತಿಭಟನೆ"ಯು ದಿನಾಂಕ 11.10.2018 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಿತು. ಈ ಪ್ರತಿಭಟನೆಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತು.







**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com